past because it does not appeal to some of us. Let us allow it to run. Sir, what I say is, because some of us are imbued with new ideas let us not talk in a very light hearted manner about something which we do not understand. Ordinary man cannot understand that there is something like tapas, something like 'Mahima', something, as Shakespeare said, higher than we can understand. There is something like philosophy, something like intuition, something like penance, something like mystery. Therefore, in these matters of religion let us not be too rational and let us not brush aside what is called faith. There may be some people who have this faith. Please tolerate them and please allow them to exist. Sir, therefore, my humble appeal to all is : This Bill is going to the Select Committee; let us see that the deliberations of the Select Committee are such that the continuity of this institution is assured and also an adequate sum for the reasonable expenditure which they are incurring is provided. I am very thankful to the House and the Speaker for the patient hearing.

Discussion on Question No. 869 re: S.A.S. Part II Examination.

MR. SPEAKER.—Sri R. Anantaraman has requested permission to raise a discussion on the subject matter on question No. 869 included in the list of questions and answers for the 29th March 1954. The question relates to S. A. S. Part II Examination conducted by the Local Services and Pleaders' Examinations Board. Under rule 39 (3) I hold the matter as of sufficient public importance. It will be taken up on Friday, the 2nd April 1954 at the conclusion of the business for the day.

The House will now rise and meet at 3-40.

The House adjourned for Lunch at Ten Minutes past Three of the Clock and reassembled at Forty Minutes past Three of the Clock.

[MR. SPEAKER in the Chair]

*ಶ್ರೀ ಎ. ಭೀಮಪ್ಪನಾಯಕ್ (ಮೊಳಕಾಲ್ಮೂರು).— ಅಧ್ಯಕ್ಷರೆ, ಮತನಂಬಂಧವಾದ ಮತ್ತು ಧರ್ಮಾರ್ಥವಾದ ಇನಾಂ ಮನೂದೆಯನ್ನು ನಾನು ಸ್ವಾಗತಿಸಲಿಚ್ಛಿಸುತ್ತೇನೆ. ಇಂಥ ಒಂದು ಮನೂದೆ ಭಾರತ ರಾಜ್ಯಾಂಗದ ರಚನೆಗನುಗುಣವಾಗಿ, ಭಾರತ ರಾಜ್ಯಾಂಗದ ಧ್ಯೇಯ ಧೋರಣೆಗಳನ್ನನುಸರಿಸಿ ಇಲ್ಲಿ ತಂದಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ರೆವೆನ್ಯೂ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರು ಇಂಥ ಒಂದು ಮನೂದೆಯನ್ನು ಚೆನ್ನಾಗಿ ಆಲೋಚನೆಮಾಡಿ ಈ ಸಭೆಯಲ್ಲಿ ತಂದಿದ್ದಕ್ಕೆ ಅವರು ಅಭಿನಂದನಾರ್ಹರೆಂದು ಹೇಳಲಿಚ್ಛಿಸುತ್ತೇನೆ. ಭಾರತ ರಾಜ್ಯಾಂಗ ರಚನೆಯನ್ನು ಏನೊಂದು ಧ್ಯೇಯ ಧೋರಣೆಯನ್ನಿಟ್ಟುಕೊಂಡು ಮಾಡಿದರೋ ರಾಜ್ಯಾಂಗ ನಿರ್ಮಾಣ, ರಾಜ್ಯದ ಸಾರ್ವತ್ರಿಕ ಜನರಿಗೆ ಬೇಕಾದ ಅನುಕೂಲತೆ, ರಾಜ್ಯ ಕಟ್ಟುವುದು ಇವುಗಳಿಗೆಲ್ಲಾ ವಿಧಿ ನಿಯಮವನ್ನೇನು ನಿರೂಪಿಸಿದ್ದಾರೋ ಅದನ್ನು ದೃಷ್ಟಿಯಲ್ಲಿಟ್ಟು ಇದನ್ನು ನೋಡಬೇಕೇ ಏನಾ ಬೇರೆ ಯಾವ ದೃಷ್ಟಿಯಿಂದ ನೋಡುವುದೂ ಅನುಚಿತವೆಂದು ಭಾವಿಸುತ್ತೇನೆ.

ಪ್ರತಿಯೊಂದು ಸಂದರ್ಭದಲ್ಲೂ ಸೆಕ್ಯುಲರ್ ಸ್ಟೇಟ್ ಎಂಬುದನ್ನು ಅನೇಕರು ಅನೇಕ ವಿಧದಲ್ಲಿ ಅರ್ಥ ಮಾಡಿಕೊಳ್ಳುತ್ತಿದ್ದಾರೆಂಬುದು ಬಹಳ ವಿಷಾದಕರ. ಇದಕ್ಕೆ ಇನ್ನಾವ ಹೆಚ್ಚು ಅರ್ಥವನ್ನೂ ಯಾರೂ ಕೊಡಬೇಕಾದ ಅಗತ್ಯವಿಲ್ಲ. ಭಾರತದಲ್ಲಿ ಯಾವ ಧರ್ಮ, ಯಾವ ಜಾಗೃತಿ, ಯಾವ ನಡೆನುಡಿಗಳು ಈಗಿರುತ್ತವೆಯೋ ಅವುಗಳಿಗೆ ರಕ್ಷಣೆ ಕೊಟ್ಟಿದ್ದೇವೆ. ಜನರು ಅವರ ಆಚಾರ ವಿಚಾರಗಳನ್ನು ಅವರಿಗೆ ಇಷ್ಟ ಬಂದ ರೀತಿಯಲ್ಲಿ ಅಂದರೆ ಸಾರ್ವಜನಿಕ ಹಿತಕ್ಕೆ ಧಕ್ಕೆಯಾಗದ ರೀತಿಯಲ್ಲಿ, ಶಾಂತಿಗೆ ಭಂಗಬಾರದ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಯಾರದೂ ಯಾವ ಅಭ್ಯಂತರವೂ ಇಲ್ಲ. ಸರ್ಕಾರ ಈ ಸಂದರ್ಭದಲ್ಲಿ ಇಂಥ ಹಿತಕ್ಕೆ ಧಕ್ಕೆ ಬರುವುದಾದರೆ ರಕ್ಷಣೆ ಕೊಡುತ್ತೇವೆಂದು ಗ್ಯಾರಂಟಿಯಾಗಲಿ, ಎಲ್ಲಾ ಮತಗಳನ್ನೂ ತೃಪ್ತಿಗೊಳಿಸಿ ಎಲ್ಲಕ್ಕೂ ಬೇಕಾದ ಅನುಕೂಲ ಒದಗಿಸುತ್ತೇವೆಂದಾಗಲಿ ಹೇಳಿಲ್ಲವೆಂದರೆ ಅದರಲ್ಲಿ ಅರ್ಥವಿಲ್ಲ.

ಈ ದಿವಸ ಭಾರತವು ಎಲ್ಲಾ ಜಾತಿಮತಗಳಕ್ಕೇಂದ್ರ ಸ್ಥಾನವಾಗಿದೆ. ಹೀಗಿದ್ದಮಾತ್ರಕ್ಕೆ ಎಲ್ಲಾ ಮತ ತತ್ವಗಳನ್ನೂ ಬೆಳೆಸಿಕೊಂಡು ಸಾರ್ವತ್ರಿಕ ಅನುಕೂಲತೆಯ ದೃಷ್ಟಿಯಿಂದ ಸಹಕರಿಸುತ್ತೇವೆಂದು ಯಾವಾಗಲೂ ಯಾರೂ ತಿಳಿಯಬಾರದು. ಪ್ರತಿಯೊಬ್ಬರಿಗೂ ತಮ್ಮ ತಮ್ಮ ಧರ್ಮಗಳನ್ನು ರಕ್ಷಿಸುವುದಕ್ಕೆ ನೂಕ್ತ ಭರವಸೆಯು ರಾಜ್ಯಾಂಗ ದತ್ತವಾಗಿ ದೊರಕಿದೆ. ಅಂದಮೇಲೆ ಈ ಮನೂದೆಯಿಂದ ಧರ್ಮ ಸಂಸ್ಥೆಗಳಿಗೆ ಧಕ್ಕೆ ತಗಲುತ್ತದೆಯೆಂದು ತಿಳಿಯಲು ಅವಕಾಶವೇ ಇಲ್ಲ. ಈ ಧರ್ಮ ಸಂಸ್ಥೆಗಳು ಅನೂಚಾನವಾಗಿ ನಡೆದುಕೊಂಡು ಹೋಗುವುದಕ್ಕೆ ಯಾವ ಅಡ್ಡಿ ಆತಂಕವೂ ಇಲ್ಲ. ಈ ದಿವಸ ಭೂಮಿಯನ್ನು ಸರ್ಕಾರದವರು ತಮ್ಮ ವಶಪಡಿಸಿಕೊಂಡು ಅದನ್ನು ಎಲ್ಲಾ ಹಕ್ಕುದಾರರಿಗೂ ಕೊಟ್ಟು ಅದರಿಂದ ಆದಾಯ ಸರಿಸಮನಾಗಿ ಬರುವಂತೆ ಮಾಡಿದರೆ ಮತಕ್ಕೆ, ಧರ್ಮಕ್ಕೆ ಧಕ್ಕೆ ಬರುತ್ತದೆ ಎಂದು ಭಾವಿಸಿದರೆ ಅದು ತಪ್ಪಾಗುತ್ತದೆಂದು ನನ್ನ ಅಭಿಪ್ರಾಯ. ಈ ದಿನ ಧರ್ಮ ಸಂಸ್ಥೆಗಳು ಬರೀ ಸಾರ್ವಜನಿಕ ಸ್ವತ್ತಿನಮೇಲೆಯೇ ಆಧಾರವಾಗಿ ನಿಲ್ಲಲು ತೊಡಗಬಾರದು. ಈ ರೀತಿಯ ಅಭಿಪ್ರಾಯ ಸಾರ್ವಜನಿಕರ ಮೇಲೆ ಯಾವ

(ಶ್ರೀ ಎ. ಭೀಮಪ್ಪನಾಯಕ್.)

ರೀತಿ ಪರಿಣಾಮವನ್ನುಂಟುಮಾಡುತ್ತದೆ ಎಂಬುದನ್ನು ನೋಡಬೇಕು. ಕೆಲವು ಧರ್ಮ ಸಂಸ್ಥೆಗಳು ಯಾವ ಜಾತಿಮತ ಕೋಮುಗಳ ಭೇದಭಾವನೆಯನ್ನೂ ಇಟ್ಟುಕೊಳ್ಳದೆ ಜನಸಾಮಾನ್ಯರಿಗೆ ಸೌಕರ್ಯವನ್ನು ಒದಗಿಸಿಕೊಡುತ್ತಿವೆ. ಅವುಗಳಿಗೆ ಈ ದಿವನ ಯಾವ ಜೋಡಿ, ಜಹಗೀರಿ, ಇನಾಂಗಳೂ ಇಲ್ಲ. ಸಿರಿಗೆರೆ ಮಠಕ್ಕೆ ಸೇರಿದ ಒಂದು ಹೈಸ್ಕೂಲಿನಲ್ಲಿ ಈ ರೀತಿ ಸೌಕರ್ಯ ಕಲ್ಪಿಸಿರುವುದನ್ನು ಎಲ್ಲರೂ ಇಂದು ನೋಡಬಹುದು. ಅದೇ ರೀತಿ ಸುತ್ತೂರು ಮಠದವರು ಸಹ ಜನರಿಗೆ ಸೌಕರ್ಯ ಕಲ್ಪಿಸಿರುತ್ತಾರೆ. ಇದಕ್ಕೆ ಸಾವಿರಾರು ಮಂದಿ ಭಾರತೀಯರು—ಜಾತಿಮತ ಕೋಮುಗಳ ಬೇಧಭಾವನೆಯಿಲ್ಲದೆ ಸೇರಿರುತ್ತಾರೆ. ಇಂಥ ಒಂದು ಧರ್ಮಸಂಸ್ಥೆ ಇದು. ಜನರು ಇಂಥ ಧರ್ಮಸಂಸ್ಥೆಗಳನ್ನು ಶೃಂಗೇರಿ ಮಠಕ್ಕೆ ತುಲನಮಾಡಿ ನೋಡಿದರೆ ಏನಾಗುತ್ತದೆ ಎಂಬುದನ್ನು ಆಲೋಚಿಸಬೇಕು. ಈ ದಿವನ ಈ ಮಠಕ್ಕೆ ಸೇರಿದ ಜಹಗೀರಿಯ ಹುಟ್ಟುವಳಿ ಏನಿದ್ದರೂ ಈ ಮಠದ ದೀಪಟಿಗೆ ಹಚ್ಚುವುದಕ್ಕೆ ಉಪಯೋಗವಾಗಿದೆಯೇ ಹೊರತು, ಅದಕ್ಕಿಂತ ಹೆಚ್ಚು ಸಾಧನೆ ಇದರಿಂದ ನಡೆದಿಲ್ಲವೆಂದು ಹೇಳಬೇಕಾಗಿದೆ. ಇಂದು ಅನೇಕ ಧರ್ಮಸಂಸ್ಥೆಗಳು ಹೆಣ್ಣು, ಹೊನ್ನು, ಮಣ್ಣು—ಇವು ಯಾವುವನ್ನೂ ಅಪೇಕ್ಷಿಸದೆ, ಧಾರ್ಮಿಕ ತತ್ವವನ್ನು ಹರಡುವ ವಿಚಾರದಲ್ಲಿ, ಜನರಿಗೆ ತತ್ವ ಬೋಧನೆಮಾಡುವುದರಲ್ಲಿ, ಇತರ ಸೌಕರ್ಯ ಒದಗಿಸುವುದರಲ್ಲಿ ಮುನ್ನುಗ್ಗಿವೆ ಎಂಬುದನ್ನು ಯಾರೂ ಮರೆಯಬಾರದು. ಇಂದು ಈ ಮನೂದೆಯನ್ನು ಪ್ರತಿಭಟಿಸಿದವರು ಈ ಇನಾಂ, ಜಹಗೀರಿಗಳನ್ನು ಧರ್ಮಸಂಸ್ಥೆಗಳು ಉಳಿಸಿಕೊಂಡು ಬರುವುದಕ್ಕೆ ಏನು ವಿಶೇಷ ತರದ ಹಕ್ಕನ್ನು ಗಳಿಸಿದೆ, ಏನು ವಿಶೇಷ ಸಾಧನೆ ಮಾಡಿವೆಯೆಂಬುದನ್ನು ಹೇಳಿಲ್ಲ. ಹೀಗಿರುವಾಗ ಅವರ ವಾದಕ್ಕೆ ಏನು ಪುಷ್ಟಿ ದೊರಕಿದಂತಾಗಿದೆ? ಈ ದಿನ ಈ ಧರ್ಮ ಸಂಸ್ಥೆಗಳು ಇನಾಂ, ಜೋಡಿ—ಇವುಗಳನ್ನು ಉಳಿಸಿಕೊಂಡು ಬರಬೇಕೆಂದು ಹೇಳುವುದಕ್ಕೆ ಅಗತ್ಯತೆ ಏನಿದೆ? ಈ religious inamಗಳನ್ನು ಇತರ ಇನಾಂಗಳಂತೆ ಪರಿಗಣಿಸಬಾರದು ಎಂದು ಹೇಳುವುದಕ್ಕೆ ವೈಶಿಷ್ಟ್ಯವೇನಿದೆ? ಈ ವಿಚಾರದಲ್ಲಿ ಭಾಷಣಕಾರರು ನಮ್ಮ ಮನಸ್ಸಿನ ಮೇರೆ ಯಾವ ಪರಿಣಾಮವನ್ನೂ ಉಂಟುಮಾಡಿಲ್ಲ. ಈಗಿನ ಕಾಲ ಜಹಗೀರುದಾರರ ಕಾಲವಲ್ಲ. ಉಳುವವನೇ ಭೂಮಿಯ ಒಡೆಯ ಎಂದು ಪರಿಗಣಿಸುವ ಕಾಲ. ಈ ಕಾಲವನ್ನರಿತು, ನಾವು ಇದಕ್ಕನುಸಾರವಾಗಿ ವರ್ತಿಸಬೇಕು. ಈ ಧರ್ಮಸಂಸ್ಥೆಗಳ ಸ್ವಾಸ್ಥ್ಯವನ್ನು ಪಡೆದಿರುವವರಿಂದ ನಿಜವಾಗಿಯೂ ಈ ಪ್ರತಿಭಟನೆಯಲ್ಲ. ಈ ಧರ್ಮಸಂಸ್ಥೆಯ ಹೆಸರಿನಲ್ಲಿ, ಸೋಗಿನಲ್ಲಿ ಹೊಟ್ಟೆ ಹೊರೆದುಕೊಳ್ಳುತ್ತಿರುವವರದೇ ಗಲಾಟೆ. ಶೃಂಗೇರಿ ಮಠದವರಿಂದ ಈ ಕೂಗು ಕೇಳಿಬಂದಿಲ್ಲ. ಈ ದಿನ ಈ ಮನೂದೆ ಅಂಗೀಕೃತವಾದರೆ ಅವರ ಧರ್ಮಕ್ಕೇ ಧಕ್ಕೆ ಬರುತ್ತದೆಂಬ ಕೂಗು ಅವರಿಂದ ಕೇಳಿ ಬಂದಿಲ್ಲ. ಹೀಗಿರುವಲ್ಲಿ ಈ ಮಠದ ಶಿಷ್ಯರು ಇದರ ವಿಚಾರದಲ್ಲಿ ಇಲ್ಲಸಲ್ಲದ ಅಪಪ್ರಚಾರಮಾಡಿ ಜನರ ಮನಸ್ಸಿನಲ್ಲಿ ಹೆದರಿಕೆಯನ್ನುಂಟುಮಾಡುವ ಗೋಜಿಗೆ ಹೋಗುವುದು ಎಂದಿಗೂ ಶ್ರೇಯಸ್ಕರವಾದ ಮಾರ್ಗವಲ್ಲ. ಇದರಿಂದ ಜನರು ಎಂದಿಗೂ ಮರುಳಾಗುವುದಿಲ್ಲ. ಈ ದಿನ ಶೃಂಗೇರಿ ಜಹಗೀರಿ ರದ್ದಾಗಿ ಸರ್ಕಾರದ ವಶಕ್ಕೆ ಬರುವುದರಿಂದ ಶೃಂಗೇರಿ ಮಠಕ್ಕೆ ಯಾವ ರೀತಿಯ ತೊಂದರೆಯೂ ಆಗುವುದಿಲ್ಲ. ಈ ದಿನ ಶೃಂಗೇರಿ ಮಠದಲ್ಲಿ ಕೆಲವು ಹೆಗ್ಗಣಗಳಿವೆ. ಅವುಗಳ ದಾಂಧಲೆಯೇ ಜಾಸ್ತಿ ಎಂಬುದನ್ನು ಜನರು ಅರಿಯಬೇಕು. ಇವುಗಳ ಹಾವಳಿ ನಾಳೆ ಕಡಮೆಯಾಗಿ ಸರ್ಕಾರದಿಂದ ಸಲ್ಲಿಸಾಗಿ ಇನ್ನೂ ಅನುಕೂಲತೆ ಈ ಮಠಕ್ಕೆ ದೊರೆಯುತ್ತದೆ. ಆದುದರಿಂದ ಸಾವಧಾನವಾಗಿ ಈಗಿನ ಕಾಲ ಧರ್ಮಕ್ಕೆ ಅನುಸಾರವಾಗಿ ನಾವು ಈ ವಿಚಾರವನ್ನು ಪರಿಗಣಿಸಬೇಕಾಗಿದೆ.

4 P.M.

ಆದರಲ್ಲಿ ಏನೂ ಅನುಮಾನ ಇಲ್ಲ. ಸಾರ್ವಜನಿಕರ ಹಿತಕ್ಕೆ ಉಪಯೋಗವಾಗುತ್ತಿದೆ ಎಂದಾದರೆ ಮಾತ್ರ ಮುಂದೆಯೂ ಉಳಿಯುತ್ತದೆ, ಅದನ್ನು ಚೆನ್ನಾಗಿ ತಿಳಿದುಕೊಂಡು ಕೆಲಸಮಾಡಬೇಕೆಂದು ಹೇಳುತ್ತೇನೆ. ಆದರಲ್ಲೇನೂ ತಪ್ಪಿಲ್ಲ. ಬರೀ ಪೌರೋಹಿತ್ಯ, ಬರೀ ನಮಾರಾಧನೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಬದಲು, ಎಷ್ಟು ಶಾಲೆಗಳಿವೆ, ಎಷ್ಟು ಸಂಸ್ಕೃತಿ ಪ್ರಚಾರ ಕಾರ್ಯ ನಡೆದಿದೆ, ಜನತೆಯ ಆರ್ಥಿಕ ಸ್ಥಿತಿಯನ್ನು ಉನ್ನತಗೊಳಿಸಲು ಏನೇನು ಅನುಕೂಲಗಳಾಗಿವೆ ಎಂಬ ವಿಚಾರಗಳನ್ನು, ಇಂಥ ಯಾವುದಾದರೂ ಒಂದು ಸಂಸ್ಥೆಯನ್ನು ಉಳಿಸಿಕೊಳ್ಳಬೇಕಾದರೆ ಹೇಳಿ. ನಾವು ಇಂಥಿಂಥಾ ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ ಎಂದು ಅಂದಿದ್ದರೆ ಶೃಂಗೇರಿ ಒಂದೇ ಅಲ್ಲ ಯಾವ ಸಂಸ್ಥೆಯೇ ಆಗಲಿ ಅಲ್ಲಿ ಒಳ್ಳೆಯ ಕಾರ್ಯನಡೆಯುತ್ತಿದೆ ಎಂಬ ಒಂದು ಒಳ್ಳೆಯ ಮಾತನ್ನು ಹೇಳುವುದಕ್ಕೆ ಈ ಅಸೆಂಬ್ಲಿಯಲ್ಲಿರತಕ್ಕ ಇಷ್ಟು ಜನರಲ್ಲಿ ಎರಡು, ಮೂರು ಜನಗಳಾದರೂ ಇಲ್ಲದೇ ಇರುತ್ತಿದ್ದರೇ? ನಮ್ಮ ಸ್ನೇಹಿತರು ದೇಶದ ಜನಗಳ ಅಭಿಪ್ರಾಯದಂತೆ ನಡೆಯಿರಿ ಅಂದರು. ದೇಶದ ಜನಗಳ ಪ್ರತಿನಿಧಿಗಳಾಗಿ ಬಂದವರು ಹೇಳಿದರೆ, ದೇಶದ ಜನಗಳ ಅಭಿಪ್ರಾಯ ಪಡೆಯಿರಿ ಎಂದು ಅನ್ನುವುದು; ದೇಶದ ಜನಗಳ ಅಭಿಪ್ರಾಯ ತೆಗೆದುಕೊಂಡರೆ, ಈ ಸಭೆಯ ಪ್ರತಿನಿಧಿಗಳ ಅಭಿಪ್ರಾಯದಂತೆ ನಡೆಯಿರಿ ಎಂದು ಅನ್ನುವುದು—ಇದು ಅನುಕೂಲ ಸಿಂಧು ಎನ್ನುವ ಮಾತೇ ಹೊರತು ನಿಜವಾಗಿಯೂ ಇದಕ್ಕೆ ಸಂಬಂಧಪಟ್ಟಂತೆ ವಿಷಯಗಳನ್ನು ಸಮರ್ಥನೆ ಮಾಡಿ ಹೇಳತಕ್ಕ ಮಾತಲ್ಲ. ಇವೊತ್ತು ಪ್ರಜೆಗಳ ಪ್ರತಿನಿಧಿಗಳಾಗಿ ಬಂದಿರತಕ್ಕ ಶ್ರೀ ರಾಮಯ್ಯನವರು, ದೇಶದ ಎಲ್ಲಾ ಸಮಸ್ಯೆಗಳನ್ನೂ ಸಭೆಯ ಮುಂದೆ ತಂದು ತೀರ್ಮಾನಿಸುವಾಗ ದೇಶದ ಜನರ ಅಭಿಪ್ರಾಯ ತೆಗೆದುಕೊಳ್ಳಿ, ದೇಶದಲ್ಲಿ ಜನರ ಕೂಗು ಹೀಗಿದೆ ಅನ್ನುವುದಾದರೆ, ಮೈಸೂರು ದೇಶದ 90 ಲಕ್ಷ ಅಥವಾ 1 ಕೋಟಿ ಜನರ ಪ್ರತಿನಿಧಿಗಳಾಗಿ ನಾವು ಈ ದಿವನ ಇಲ್ಲಿಗೆ ಬಂದಿದ್ದೇವೆ; ನಮ್ಮ ಜನರ ಅಭಿಪ್ರಾಯ ಏನೆಂಬುದನ್ನು ನಾವು ತಿಳಿದುಕೊಂಡಿದ್ದೇವೆ. ಹೀಗಿರುವಾಗ ಇವರು ಹೇಳುವುದು ಬೇಡ, ಇಲ್ಲ ಯಾರಾದರೂ ವಿರೋಧಿಸಬಹುದು, ದೇಶದ ಅಭಿಪ್ರಾಯದಂತೆ ನಡೆಯಿರಿ ಎಂದರೆ ನಮ್ಮನ್ನು ಚುನಾಯ್ಕೆಮಾಡಿಸಿದಂಥ ಆ ಜನಗಳಿಗೆ ಮಾನ್ಯತೆ ಕೊಟ್ಟಹಾಗಾಗುವುದಿಲ್ಲ ಎಂದು ಹೇಳಿ ನಾನು ವಿನಯದಿಂದ ಶ್ರೀ ರಾಮಯ್ಯನವರಿಗೆ ತಿಳಿಸಬಯಸುತ್ತೇನೆ. ಜಹಗೀರಿಯಲ್ಲಿ ಎಲ್ಲಾ ಹಕ್ಕುಗಳನ್ನೂ ಕೊಟ್ಟಿದ್ದೇವೆ ಎನ್ನುತ್ತಾರೆ. ಏನು ಹಕ್ಕು ಕೊಟ್ಟಿದ್ದಾರೆ ಎಂಬುದನ್ನು ಕೂಲಂಕಷವಾಗಿ ವಿಚಾರಮಾಡಿ ನೋಡೋಣ. ಈ ದಿವನ ಜಹಗೀರಿ ಜಮೀನಿನಲ್ಲಿ ಒಂದು ಮನೆಕಟ್ಟಿಕೊಳ್ಳಬೇಕೆಂದರೆ ಆಗಲಿ ಅಗ್ರಿಕಲ್ಚರಲ್ ಲ್ಯಾಂಡನ್ನು ನಾನ್-ಅಗ್ರಿಕಲ್ಚರಲ್ ಪರ್‌ಪಸ್‌ಗೆ ಕನ್‌ವರ್ಟ್‌ಮಾಡಿಕೊಳ್ಳಬೇಕೆಂದರೆ ಆಗಲಿ ಒಂದು ಪರ್ಮಿಷನ್ ಇಲ್ಲದೆ

ಆಗುತ್ತದೆಯೇನು ? ಸರ್ಕಾರದವರಲ್ಲಿ ಹೇಳುವಾಗ ಸರಿಯಾಗಿ ಹೇಳಬೇಕೆಂದು ರಾಮಯ್ಯನವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಒಬ್ಬ ಅಧಿಕಾರಿಯನ್ನು ನೇಮಕಮಾಡಬೇಕೆಂದರೆ ಎಷ್ಟೋ ಸಾರಿ ಪತ್ರ ವ್ಯವಹಾರ ನಡೆಸಬೇಕಾಗುತ್ತದೆ. ಪ್ರತಿಯೊಂದೂ ನಮ್ಮನ್ನು ಕೇಳಿಮಾಡಿರಿ ಎಂದ ಹೇಳುತ್ತಾರೆ. ಮಠದಲ್ಲಿ ಇರತಕ್ಕ ಗುರುಗಳು ದೇವರ ಧ್ಯಾನದಲ್ಲಿ ತಲ್ಲೀನರಾಗಿರುವವರು ; ಅವರನ್ನು ಕೇಳುವ ಹಾಗಿಲ್ಲ. ಅವರ ಸೇವೆಯಲ್ಲಿ ಉದ್ಯುಕ್ತರಾಗಿರುವ ಹಲವಾರು ಜನ ಪಾರುಪತ್ತೇಗಾರರು ಅರಮನೆ ಹೆಗ್ಗಣಗಳಂತೆ ಯಾರು ಇದ್ದಾರೋ ಅವರನ್ನು ಏನು ಅನುಕೂಲ ಮಾಡಬೇಕಾದರೂ ಕೇಳಿಮಾಡಿರಿ ಎಂದರೆ ಅದು ಎಲ್ಲಯತನಕ ಸಾಧ್ಯ ? ಮೈಸೂರು ದೇಶದ ಇತರ ಎಲ್ಲ ಹಳ್ಳಿಗಳನ್ನೂ ಊರುಗಳನ್ನೂ ಪ್ರತಿನಿಧಿಸತಕ್ಕ ಸರ್ಕಾರ ಇರುವಾಗ ಅವರು ಪ್ರತಿಯೊಂದನ್ನೂ ಒಬ್ಬ ಜಹಗೀರುದಾರನನ್ನು ಕೇಳಿ ಮಾಡಬೇಕೆಂದರೆ ಆಡಳಿತ ನಡೆಯುತ್ತದೆಯೇ ? ದೇಶದ ಹಿತರಕ್ಷಣೆ ಆದೀತೇ ? ಜನಗಳು ಅದರಿಂದ ಸಮಾಧಾನಗೊಂಡಾರೇ ? . ಈ ದಿವಸ ಶೃಂಗೇರಿಯಿಂದ ಬಂದಿರತಕ್ಕ ಸದಸ್ಯರು ಅಲ್ಲಿ ಯಾವುದಾದರೂ ಒಂದು ಕೆರೆ ಕಟ್ಟಿಸಬೇಕೆಂದರೆ ಸರ್ಕಾರದವರು ಏನು ಹೇಳುತ್ತಾರೆ ? ನಮ್ಮದು ಏನೂ ಇಲ್ಲ, ಆದಾಯ ಎಲ್ಲಾ ಜಹಗೀರುದಾರರೇ ಪಡೆಯುತ್ತಾರೆ, ಅವರನ್ನೇ ಕೇಳಬೇಕು ಎಂದು ಹೇಳುತ್ತಾರೆ. ಮಠದವರನ್ನು ಕೇಳಿದರೆ ' ಸ್ವಾಮಿಗಳು ಧ್ಯಾನಮಗ್ನರಾಗಿದ್ದಾರೆ, ಎಚ್ಚರ ಆದಾಗ ಕೇಳುತ್ತೇವೆ ' ಎಂದು ಹೇಳುತ್ತಾರೆ. ಈ ಕಡೆ ಕೆರೆ ಒಡೆದುಹೋಗಿ, ಬೆಳೆ ಎಲ್ಲಾ ಕೆಟ್ಟುಹೋಗುತ್ತಾ ಇರುತ್ತದೆ, ಆ ಕಡೆ ಸ್ವಾಮಿಗಳು ಧ್ಯಾನಮಗ್ನರಾಗಿ ದೇವರ ಕಡೆ ನೋಡುತ್ತ ಇದ್ದರೆ, ಕೇಳುವುದು ಯಾರನ್ನು ? ಇದು ಸಾಧಾರಣವಾಗಿ ನಿತ್ಯಗಟ್ಟಲೆ ಅಲ್ಲೇ ಇದ್ದು ಕಷ್ಟ ಅನುಭವಿಸತಕ್ಕ ಜನಗಳಿಗೆ ಅದರ ಕಷ್ಟ ಸುಖ ಗೊತ್ತೇ ಹೊರತು ಎಲ್ಲವನ್ನೂ ಕೊಟ್ಟಿದ್ದೇವಲ್ಲಾ, ಏನೇನುಬೇಕೋ ಎಲ್ಲವೂ ಇದೆ ಎಂದು ಬೊಂಬಾಯಿನಿಂದ ಬಂದು ಹೇಳುವವರಿಗೆ ಆ ಕಷ್ಟ ಏನು ಗೊತ್ತಾಗುತ್ತದೆ ? Development activities, ಮತ್ತೊಂದು, ಇನ್ನೊಂದು ಮಾಡುವಾಗ ನಾವು ಹೇಳುತ್ತೇವೆ : ಸ್ವಾಮಿ, ಆದಾಯ ಪಡೆಯುವವರು, ಅನುಕೂಲ ಹೊಂದುವವರು ಒಬ್ಬರು, ಅಲ್ಲರುವ ಜನರ ಅನುಕೂಲಕ್ಕಾಗಿ ಅವರು ಖರ್ಚು ಮಾಡಬೇಕೇ ಹೊರತು ಅದಕ್ಕೆಲ್ಲಾ ಸಾರ್ವಜನಿಕರ ಹಣದಿಂದ ಒದಗಿಸಬೇಕೆಂದರೆ ಅದು ಯಾವ ಧರ್ಮ ಎಂದು ಕೇಳುತ್ತೇವೆ. ಆಗ ಏನುಮಾಡಬೇಕು ? ಈ ಡೆವಲಪ್‌ಮೆಂಟ್ ಕಾರ್ಯ ನಡೆಸತಕ್ಕ ಮಂತ್ರಿಗಳು ; ನ್ಯಾಯ ಅವರೇ ಕೊಡಬೇಕು, ಹಾಗೆ ಕೊಡದಿದ್ದರೆ, ಜನತೆಗೆ ತೊಂದರೆ ಆಗುವುದಾದರೆ, ಜನತೆ ಕಷ್ಟಪಡುವುದಾದರೆ, ಇತರ ಜನಗಳಿಗಿರತಕ್ಕ ಹಕ್ಕುಬಾಧ್ಯತೆಗಳನ್ನು ಅವರಿಗೆ ಕೊಡಿ, ಆ ನಾವು ನೀವು ಹೇಳುವುದನ್ನು ಕೇಳಬಹುದು ಎಂದು ಹೇಳುತ್ತಾರೆ. ಆದ್ದರಿಂದ ಆ ಜನರ ಹಕ್ಕನ್ನು ಎಷ್ಟೆಷ್ಟು ಆ ಜಮೀನ್‌ದಾರರು ಉಳಿಸಿಕೊಂಡಿದ್ದಾರೆ, ಎಷ್ಟೆಷ್ಟು ಹಕ್ಕನ್ನು ಜನತೆಗೆ ಕೊಟ್ಟಿದ್ದಾರೆ ಎನ್ನುವುದನ್ನು ಕೂಡ ನಾವು ಯೋಚಿಸಬೇಕಾಗಿದೆ. ಅದು ಏನೇ ಇರಲಿ. ಜಹಗೀರಿ ಅನ್ನತಕ್ಕ ಶಬ್ದವೇ ಉಳಿಯಕೂಡದು ಅನ್ನುವಾಗ ಶ್ರೀಮಜ್ಜಗದ್ಗುರುಮಹಾರಾಜರವರನ್ನು ಹೇಗೆ ಉಳಿಸಿಕೊಂಡಿದ್ದೀರಿ ? ಎಂದು ಕೇಳುತ್ತಾರೆ. ಶ್ರೀಮಜ್ಜಗದ್ಗುರುಮಹಾರಾಜರು ಮೈಸೂರು ದೇಶದಲ್ಲಿ ಇದ್ದಂಥ ಪ್ರತಿಪ್ರಜೆಗೂ ಶ್ರೀಮಜ್ಜಗದ್ಗುರುಮಹಾರಾಜರಾಗಿದ್ದರು. ಆದರೆ ಶೃಂಗೇರಿ ಮಠ ಮೈಸೂರು ದೇಶದ ಪ್ರತಿಪ್ರಜೆಗೂ ಮಠ ಎಂದು ನಾವಂತೂ ಒಪ್ಪಿಕೊಳ್ಳುವುದಿಲ್ಲ. ಅದ್ವೈತದವರನ್ನು ದ್ವೈತದವರು ಒಪ್ಪಿಕೊಳ್ಳುವುದಿಲ್ಲ. ವಿಭೂತಿ ನೋಡಿದರೆ ಪಾಪ ಬರುತ್ತದೆ, ರೌರವನರಕಕ್ಕೆ ಹೋಗುತ್ತೇವೆ ಎಂದು ಹೇಳುವವರು ಅವರಲ್ಲೇ ಇದ್ದಾರೆ. ಆದ್ದರಿಂದ ಇದು ಸಾರ್ವಜನಿಕರೆಲ್ಲರಿಗೂ ಸೇರಿದ್ದೆಲ್ಲ ಎಂದು ಹೇಳುವ ಧೈರ್ಯ ಇಲ್ಲ ಎಂದು ಯಾರೂ ತಿಳಿದುಕೊಳ್ಳಬೇಡಿ. ಮೊನ್ನೆ ಮೊನ್ನೆ ನಡೆದದ್ದು, ಒಬ್ಬ ಅಧಿಕಾರಿ ಅಲ್ಲಗೆ ಹೋಗಿದ್ದಾಗ ನಡೆದ ಪ್ರಸಂಗ ಇನ್ನೂ ಹಸುರು, ಹಸುರಾಗಿ ಕಾಣುತ್ತಾ ಇದೆ. ಆದ್ದರಿಂದ ನಿಮ್ಮ ಧ್ಯೇಯೋದ್ದೇಶ ಚೆನ್ನಾಗಿದ್ದರೆ ಮಠ ಹೋಗುವುದಕ್ಕೆ ಕಾರಣವೇನಿದೆ ? ಏಕೆ ಹೋಗುತ್ತದೆ ? ಎಲ್ಲಯವರೆಗೆ ನಿಮ್ಮ ಬಹಳ ಸಂಕುಚಿತವಾದ ಭಾವನೆಯನ್ನು, ದೃಷ್ಟಿಯನ್ನು ವಿಶಾಲಗೊಳಿಸದೇ ಕೆಲಸ ಮಾಡುತ್ತೀರೋ ಅಲ್ಲಯವರಗೂ ಸಾರ್ವಜನಿಕರ ಒಂದು ಸಹಾಯ ಒದಗುವುದಿಲ್ಲ. ಇಷ್ಟರವರೆಗೆ ವಿಶಾಲದೃಷ್ಟಿ ಏನಾದರೂ ಬಂದಿದ್ದರೆ ಯಾವ ಅಡಚಣೆಯೂ ಆಗುತ್ತಾ ಇರಲಿಲ್ಲ. ಒಂದುವೇಳೆ ವಿಶಾಲದೃಷ್ಟಿ ಇದೆ ಅಂದರೂ ಕೂಡ ಭೂಮಿಯ ಒಡೆತನಕ್ಕೂ ಮಠಕ್ಕೂ ಯಾವ ಸಂಬಂಧವೂ ಇಲ್ಲ. ಅದನ್ನು ಎಲ್ಲರೂ ಚೆನ್ನಾಗಿ ತಿಳಿದುಕೊಳ್ಳಬೇಕು. ಭೂಮಿಯ ಒಡೆತನ ಉಳುವವನದು ಎಂಬುದನ್ನು ಇವೊತ್ತಲ್ಲ ಬನವಣ್ಣನವರ ಕಾಲದಲ್ಲೇ ಘೋಷಣೆ ಮಾಡಿದ್ದಾರೆ. ಈಗ ಶೃಂಗೇರಿ ಮಠವನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡು ಮಾತನಾಡಬಾರದು. ಇತರ ರಿಲಿಜಿಯಸ್ ಅಂಡ್ ಚಾರಿಟಬಲ್ ಇನ್‌ಸ್ಟಿಟ್ಯೂಷನ್‌ಗಳು ಎಷ್ಟೋ ಇವೆ. ಅವನ್ನೂ ಲಕ್ಷ್ಯಕ್ಕೆ ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಶೃಂಗೇರಿ ಮಠಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂಬುದನ್ನೂ ನಾನು ಒಪ್ಪುವವನಲ್ಲ. ದೇಶದಲ್ಲಿ ರತಕ್ಕ ಬಾಕಿ ದೇವಸ್ಥಾನಗಳು, ಸಂಸ್ಥೆಗಳು, ಅವರಿಗೆ ಎಷ್ಟು ಅನುಕೂಲತೆ ಇರುತ್ತದೆಯೋ ಅದಕ್ಕಿಂತ ಕಡಮೆ ಮಾಡಬೇಡಿ ಎಂದು ಹೇಳುತ್ತೇನೆ. ಈ ದಿವಸ ಅವರ ತತ್ವ ಘೋಷಣೆ ಮಾಡಿ ನಮ್ಮನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುವುದು ಎಷ್ಟರಲ್ಲದೆಯೋ, ಅವರ ತತ್ವ ಘೋಷಣೆ ಮಾಡದೇ ನರಕದಲ್ಲಿ ದೂಡುವುದೂ ಅಷ್ಟರಲ್ಲೇ ಇದೆ. ಈ ದಿವಸದ ಪರಿಸ್ಥಿತಿ ಹೇಗಿದೆ ಎಂದರೆ ಈಗಿನ ವಿದ್ಯಾಭ್ಯಾಸದ ರೀತಿ ನೀತಿಯೇ ಬೇರೆ, ಈಗಿನ ಸಂಸ್ಕೃತಿಯ ರೀತಿ ನೀತಿಯೇ ಬೇರೆ, ನೈತಿಕ ರೀತಿ ನೀತಿಯೇ ಬೇರೆ. ಆ ದೃಷ್ಟಿಯಿಂದ ಈ ದಿವಸ ಎಲ್ಲರಲ್ಲೂ ಅರಿಕೆ ಮಾಡಿಕೊಳ್ಳುವುದೇನೆಂದರೆ : ಈ ದೇವಸ್ಥಾನಗಳು ಮತ್ತು ಮತೀಯ ಸಂಸ್ಥೆಗಳು ಒಂದು ವಿಧದಲ್ಲಿ ಬಾಳಬೇಕು ; ಬದುಕಬೇಕು ; ಆ ರೀತಿ ಬಾಳಿ ಬದುಕುವುದಕ್ಕೆ ಇದರಲ್ಲಿ ಸಾಕಾದಷ್ಟು ರಕ್ಷಣೆ, ಅನುಕೂಲತೆ ಇದೆ. ಆದಾಯ ಅವರಿಗೆ ಬರುತ್ತದೆ. ಆದನ್ನು ಉಳಿಸಿಕೊಡಬೇಕೆಂಬ ಉದಾತ್ತವಾದ ಭಾವನೆಯಿಂದಲೇ ಮಾನ್ಯ ರವೆನ್ಯೂ ಸಚಿವರು ಇದನ್ನು ತಯಾರು ಮಾಡುವಾಗ ಯೋಚಿಸಿದ್ದಾರೆ ಎಂದು ನನ್ನ ಭಾವನೆ. ಅದನ್ನು ಉಳಿಸಿಕೊಡುವುದು ಒಳ್ಳೆಯದು, ಅದರ ಜೊತೆಗೆ ಸರ್ವತೋಮುಖವಾಗಿ ಅವುಗಳಿಂದ ಎಲ್ಲರಿಗೂ ಅನುಕೂಲವಾಗಬೇಕು. ಅವನ್ನು public institutions ಎಂದು ಭಾವಿಸಬೇಕೆಂದು ಹೇಳುತ್ತೇನೆ. ಇನ್ನು ಮುಂದಾದರೂ ಇವುಗಳ ಮನೋಧರ್ಮ ಬದಲಾವಣೆ ಆಗುವಂತೆ ಇದರಲ್ಲಿ ಕಂಡೀಷನ್ ಹಾಕಬೇಕೆಂದು ನನ್ನ ಅಭಿಪ್ರಾಯ. ಈಗ ಅನ್ಯಾಯತಾ ನಿವಾರಣೆ ಆಗಿದೆ. ಯಾವುದಾದರೂ ಒಂದು ದೇವಸ್ಥಾನಕ್ಕೆ ಅನ್ಯಾಯರು ಹೋಗಿ ಅಲ್ಲಿ ಅವರಿಗೆ ಅವಕಾಶವಿಲ್ಲದಿದ್ದರೆ ಅದಕ್ಕೆ ಯಾವ ಧನ ಸಹಾಯ ಬೇಡ

(ಶ್ರೀ ಎ. ಭೀಮಪ್ಪನಾಯಕ್.)

ಗುತ್ತಾ ಇದೆಯೋ ಅದನ್ನು ತೆಗೆದುಹಾಕಬೇಕು ಎನ್ನುವ ಒಂದು ನಿಯಮ ಇದರಲ್ಲಿ ಸೇರಿನಬೇಕೆಂದು ನನ್ನ ಅಭಿಪ್ರಾಯ. ಯಾವ ದೇವಸ್ಥಾನವಾಗಲಿ, ಸಂಸ್ಥೆಯಾಗಲಿ ಮಾನವ ಅನ್ನತಕ್ಕವನಿಗೆ ಯಾವ ಭೇದಭಾವವೂ ಇಲ್ಲದೆ ಮಾನ್ಯತೆಯನ್ನು ಕೊಡಬೇಕು. ಇಲ್ಲದೇ ಇದ್ದರೆ ಅದು ಸಾರ್ವಜನಿಕ ಸಂಸ್ಥೆಯಾಗುವುದಿಲ್ಲ. ಅಂಥ ಸಂಸ್ಥೆಗೆ ರಕ್ಷಣೆ ದೊರೆಯಕೂಡದು. ಹಿಂದೆ ಒಂದಾನೊಂದು ಕಾಲದಲ್ಲಿ ಜಗತ್ತಿನ ಉದ್ಧಾರಕ್ಕಾಗಿ ಕೆಲಸ ಮಾಡಿ, ಅದು ಸಾರೋದ್ಧಾರವಾಗಿ ನಡೆದುಕೊಂಡು ಬರಲಿ ಎಂದು ಹೇಳಿ ಈ ಸಂಸ್ಥೆಗಳಿಗೆ ಯಾವ ಒಂದು ಮಹೋದ್ದೇಶವನ್ನಿಟ್ಟುಕೊಂಡು ದಾನ ಮಾಡಿದರೋ, ಆ ಮಹೋದ್ದೇಶವನ್ನು ನಡೆಸಿಕೊಂಡು ಬರುತ್ತಾ ಇದ್ದಾರೋ ಇಲ್ಲವೋ ? ಈಗ ಪ್ರಜೆಗಳ ಪರವಾದ ಒಂದು ಸರ್ಕಾರ ಇರುವಾಗ ಆ ಸಂಸ್ಥೆಗಳ ಆ ಒಂದು ಮಹತ್ ಧ್ಯೇಯವನ್ನು ನಡೆಸಿಕೊಂಡು ಬರುತ್ತಿಲ್ಲ ಎಂದು ತಿಳಿದುಬಂದರೆ ಅದಕ್ಕೆ ಇರತಕ್ಕ ಒಂದು ವಿಶೇಷ ಸೌಲಭ್ಯವನ್ನು ತೆಗೆದು ಹಾಕುವ ಹಕ್ಕು ಸರ್ಕಾರದವರಿಗೆ ಇರಬೇಕು ಎಂದು ಹೇಳುತ್ತೇನೆ. ಆ ರೀತಿ ಆಗುತ್ತಿದೆ ಎಂಬ ಭರವಸೆಯನ್ನು ಸೆಲೆಕ್ಟ್ ಸಮಿತಿಯವರು ಹೊಂದಿದ್ದರೆ ಮಾತ್ರ ಆ ಸಂಸ್ಥೆಗಳವರು ಕಾಂಪೆನ್ಸೇಷನ್‌ಗೆ ಅರ್ಹರಾಗುತ್ತಾರೆಯೇ ಹೊರತು ಇಲ್ಲದೇ ಇದ್ದರೆ ಅನರ್ಹರು ಎಂದು ಹೇಳುತ್ತೇನೆ. ಕಾರ್ಪಸ್ಟಿಟ್ಯೂಷನ್‌ನಲ್ಲಿ ಯಾವ ಜಮೀನನ್ನೂ ಕಾಂಪೆನ್ಸೇಷನ್ ಕೊಡದೆ ತೆಗೆದುಕೊಳ್ಳಬಾರದು ಎಂದು ಇದೆಯಲ್ಲಾ ಅಂದರೆ, ಇದು ಯಾವ ಒಬ್ಬ ವ್ಯಕ್ತಿಗೂ ಸೇರಿದ್ದಲ್ಲ, ಯಾವ ವ್ಯಕ್ತಿಯೂ ಕಷ್ಟಪಟ್ಟು ಸಂಪಾದಿಸಿದ್ದಲ್ಲ, ದೇವಸ್ಥಾನ, ದೇವರು, ಊರಿನ ಹಿತ—ಇದಕ್ಕಾಗಿ ಪ್ರೇಮದಿಂದ ಕೊಟ್ಟ ಒಂದು ಪ್ರೇಮದ ಕಾಣಿಕೆ ಆಗಿತ್ತು. ಈ ಕಾಣಿಕೆ ಎಲ್ಲಯವರೆಗೆ ಇರುತ್ತದೆ ಎಂದರೆ ಯಾವ ಉದ್ದೇಶಕ್ಕಾಗಿ ಕೊಟ್ಟರೋ ಆ ಉದ್ದೇಶ ನೆರವೇರುತ್ತ ಇರುವವರೆಗೂ ಇರುತ್ತದೆ. ಆ ದೃಷ್ಟಿಯಿಂದ ನಾವು ಈ ಸಂಸ್ಥೆಗಳಿಗೆ ಹಣವನ್ನು ಕೊಡುವಾಗ ಈ ಸಂಸ್ಥೆಗಳು ಯಾವ ಯಾವ ಕಾರ್ಯಗಳಿಗೆ ಉಪಯೋಗಿಸಬೇಕು ಎಂಬುದನ್ನು ಕೂಡ ನಿರ್ದಿಷ್ಟವಾಗಿ ಸೂಚಿಸುವ ಒಂದು ಕ್ಲಾಸನ್ನು ಹಾಕಬೇಕೆಂದು ಹೇಳುತ್ತೇನೆ. ಆ ರೀತಿ ಮಾಡಿ ಈ ಬಿಲ್ಲನ್ನು ಸರಿಯಾದ ರೀತಿಯಲ್ಲಿ ಮುಂಜೂರು ಮಾಡಬೇಕೆಂದು ಸಭೆಗೆ ಕೇಳಿಕೊಳ್ಳುತ್ತೇನೆ.

ಶೃಂಗೇರಿ ವಿಚಾರದಲ್ಲಿ ನಾನು ಕಟುವಾಗಿ ಒಂದು ಸಂದರ್ಭದಲ್ಲಿ ಮಾತನಾಡಬೇಕಾಗಿ ಬಂತು. ಅದಕ್ಕೆ ಕಾರಣ ಈಗಿರತಕ್ಕಂಥ ರೀತಿಯಲ್ಲಿ ಆ ಮಹಾ ಸಂಸ್ಥೆಯ ಮೂಲಕ ಯಾವ ಶಂಕರಾಚಾರ್ಯರು ಅದ್ವೈತ ತತ್ವವನ್ನು ಬೋಧನೆ ಮಾಡಿ ಜಗತ್ತಿನಲ್ಲೇ ಒಂದು ಜ್ಯೋತಿಯನ್ನು ಬೆಳಗಿದರೋ ಆ ಜ್ಯೋತಿ ಈಗ ಅಷ್ಟಾಗಿ ಬೆಳಗುತ್ತಾ ಇಲ್ಲ ಅಥವಾ ಜಗತ್ತಿನಲ್ಲಿರತಕ್ಕ ಎಲ್ಲರನ್ನೂ ಎಳೆಯತಕ್ಕ ಪರಿಸ್ಥಿತಿ ಅಲ್ಲಿ ಇಲ್ಲ. ಆ ಪರಿಸ್ಥಿತಿ ಉತ್ಪನ್ನಮಾಗೊಳ್ಳುವ ದೃಷ್ಟಿಯಿಂದಲೂ ಕೂಡ ಇದನ್ನು ಹೇಳಬೇಕಾಗಿದೆ. ಈ ದಿವಸ ಕನ್ಸೂರಿಬಾಯ್ ಮೆಮೋರಿಯಲ್ ಫಂಡ್ ಎಂದು ಹೇಳಿ ಸಾರ್ವಜನಿಕರ ಹಣವನ್ನು ಕೂಡಿಸಿ ಒಂದು ಸಂಸ್ಥೆ ಮಾಡಿದ್ದಾರೆ. ಅದು ಎಲ್ಲಿಯವರೆಗೆ ನಡೆಯುತ್ತದೆ ? ಯಾವ ತತ್ವ ಬೋಧನೆ ಮಾಡಿದ್ದಾರೋ ಅದನ್ನು ನಡೆಸಿಕೊಂಡು ಹೋಗತಕ್ಕವರು, ಅನುಯಾಯಿಗಳು ಎಲ್ಲಿಯವರೆಗೂ ಇರುತ್ತಾರೋ ಅಲ್ಲಿಯವರೆಗೂ ನಡೆಯುತ್ತದೆ. ಆ ಉದ್ದೇಶ ನೆರವೇರದೆ ಇದ್ದರೆ ಆ ಹಣವನ್ನು ತೆಗೆದುಕೊಂಡು ಇನ್ನಾವುದಕ್ಕಾದರೂ ಉಪಯೋಗಿಸಬೇಕಾಗುತ್ತದೆ. ಇಲ್ಲಿ ಕೂಡ ಒಂದು ಮಹಾ ತತ್ವಬೋಧೆಗಾಗಿ ಈ ಜಹಗೀರಿ ಕೊಡಲ್ಪಟ್ಟಿತ್ತು ಎಂದು ಇಷ್ಟುಮಾತ್ರ ಹೇಳಬಹುದು. ಇನ್ನೊಂದು ಉದಾಹರಣೆ ಹೇಳುತ್ತೇನೆ. ಶೇಂದಿ ಪರಾಬು ವಗೈರೆ ವಿಚಾರ ತೆಗೆದುಕೊಂಡರೆ—ಈಗ ಅದು ಡ್ರೈ ಏರಿಯಾ ಆಗಿದೆ—ಇದಕ್ಕಿಂತ ಮುಂಚೆ ಅವರಿಗೆ ಎಲ್ಲಾ ಹಕ್ಕು ಕೊಟ್ಟಿದ್ದರೆಂದು ಹೇಳುವುದಾದರೆ ಸರ್ಕಾರಕ್ಕೇಕೆ ಆ ಹಕ್ಕನ್ನು ಬಿಡುತ್ತಿದ್ದರು ? ನೀವು ನಮ್ಮ ಪ್ರದೇಶದಲ್ಲಿರುವ ಶೇಂದಿ ಬಾಬನ್ನು ಹರಾಜು ಮಾಡಬೇಡಿ ಎಂದೇಕೆ ಹೇಳಲಲ್ಲ ? ಅದು ಈಗಲೂ ಸಂದೇಹಾಸ್ಪದವಾಗಿದೆ. ಆದ್ದರಿಂದ ಇನ್ನಾರಿಗೂ ಅಲ್ಲಿ ಪ್ರವೇಶ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳುವುದು ನ್ಯಾಯವಲ್ಲ, ಧರ್ಮವಲ್ಲ. ಆ ದೃಷ್ಟಿಯಿಂದ ಈ ದಿವಸ ಅತಿ ವಿನಯದಿಂದ ಅರಿಕೆ ಮಾಡಿಕೊಳ್ಳುವುದು : ಈಗ ತಂದಿರುವ ಬಿಲ್ಲಿನಿಂದ ಈ ಸಂಸ್ಥೆಗೆ ಯಾವ ವಿಧವಾದ ಧಕ್ಕೆಯೂ ಇಲ್ಲ, ಸಂಸ್ಥೆಗೆ ಧಕ್ಕೆ ತರಲು ಈ ಮನೂದೆಯನ್ನು ತಂದಿಲ್ಲ, ಜನರಿಗೆ ಹಕ್ಕನ್ನು ಕೊಡುವುದಕ್ಕೆ, ನ್ಯಾಯವಾದ ಹಕ್ಕನ್ನು, ರಾಜ್ಯಾಂಗದಲ್ಲಿ ದತ್ತವಾದ ಹಕ್ಕನ್ನು ಕೊಡುವುದಕ್ಕೆ, ಭಾರತದ ಎಲ್ಲೆಡೆಯಲ್ಲೂ ಬೇರೆ ಪ್ರಾಂತಗಳಲ್ಲಿ ಏನೊಂದು ಕಾನೂನನ್ನು ಜಾರಿಗೆ ತಂದಿದ್ದಾರೋ, ಯಾವ ರೀತಿ ಜಮೀರ್ದಾರಿ, ಜಹಗೀರು ಮುಂತಾದುವನ್ನು ವಜಾ ಮಾಡಿದ್ದಾರೋ ಅಷ್ಟನ್ನು ಮಾತ್ರ ಮಾಡಿದೆಯೇ ಹೊರತು ಅದಕ್ಕಿಂತ ಒಂದು ಹೆಜ್ಜೆ ಕೂಡ ಮುಂದೆ ಹೋಗಿಲ್ಲ. ಆದ್ದರಿಂದ ಯಾರೂ ವಿರೋಧಿಸಬಾರದು ಎಂದು ಅರಿಕೆ ಮಾಡಿ ಈ ಮನೂದೆಯನ್ನು ಸುಸ್ವಾಗತಿಸುತ್ತೇನೆ.

Sri S. SRINIVASA IYENGAR (T.-Narsipur).—Mr. Speaker, the Religious and Charitable Inams Abolition Bill, 1954 covers the 'Devadaya inam' and 'Dharmadaya inam' in the State. Devadaya inams relate to the various religious institutions in the State and number 19,702 cases and the extent of land that is in the custody of these religious institutions measure 1·84 lakhs acres. The next class that this Bill embraces is the Dharmadaya inams. Dharmadaya inams relate to charitable institutions in the State, their number being 431 having an acreage of 2·4 lakhs. Sir, apart from these types of inams, there was another type called the 'cash' inams, that was being paid by Government for the maintenance of chatrams run by Government and these inams were abolished a few years ago and the savings constituted under a head called 'Chattram Savings Reserve' which finds even today a place in the Budget on the expenditure side on page 123. Sir, so far as the inams are concerned, at the outset I would like to place before this House some of the constitutional privileges that these inamdars enjoy and in the light of the constitutional provisions, I would like to get myself enlightened how these things

would stand. Article 26 of the Constitution of India provides as follows:—

"Subject to public order, morality and health, every religious denomination or any section thereof shall have the right –

(*a*) to establish and maintain institutions for religious and charitable purposes;

(*b*) to manage its own affairs in matters of religion;

(*c*) to own and acquire movable and immovable property; and

(*d*) to administer such property in accordance with law."

The words "with law" relates to the administration of the property. I submit, Sir, it does not relate to the extinguishment of the right. But still under Article 31-A the legislature of each State has certain powers. Article 31-A reads as follows:—

"Notwithstanding anything in the foregoing provisions of this Part, no law providing for the acquisition by the State of any estate or of any rights therein or for the extinguishment or modification of any such rights shall be deemed to be void on the ground that it is inconsistent with, or takes away or abridges any of the rights conferred by, any provisions of this Part."

Sir, in the same Article there is this Explanation:

"Explanation (*b*): the expression 'rights', in relation to an estate, shall include any rights vesting in a proprietor, sub-proprietor, under proprietor, tenure-holder or other intermediary and any rights or privileges in respect of land revenue."

So, I submit, Sir, this Article 31-A refers to the cases of intermediaries. If a person exists in between the Government and the tenant, in such a case the Article 31-A would be applicable. So far as these religious and charitable inams are concerned, they can never by taken wholly as intermediary. These are grants; outright grants. They are termed as 'Sarvamanya' villages. The holders of these villages pay only cesses to Government. There are other classes which are called Jodi villages. It is only in such cases that the holder of these inams pays a portion of revenue in the nature of Jodi to Government and there are these minor inams where the minor inam holder would pay to Government a sum called 'quit-rent' by which the Government will have extended his right over the.....

Sri Kadidal MANJAPPA.—Is it your argument that these religious institutions, though they are inam lands, cannot be called as intermediaries?

Sri S. SRINIVASA IYENGAR.—Sir, I will explain further. Sir, in the year 1951, the Government of Madras passed a piece of legislation called Religious and Charitable Endowment Act. The parties that were affected by this Act, namely, certain temples in the South and Udipi appealed against this piece of legislation in the High Court of Madras. The High Court of Madras did concede the claim of the petitioners and the Government of Madras appealed against that order to the Supreme Court. Similarly, there was another piece of legislation in Bombay called the 'Trust Act'. That had provisions relating to certain Trusts of religious and charitable institutions. The Jain Institutions and the Parsee Institutions that were affected by the Trust Act appealed to the High Court of Bombay and the learned Judge in the High Court of Bombay interpreted the provision of Article 26 of the Fundamental Rights as that since 'under law' is retained, the State has every right to legislate on this account. These two institutions have appealed to the Supreme Court. Very recently, on the 16th of March 1954, a Constitutional Bench of the Supreme Court held that the fundamental right which has been guaranteed under Article 26 of the Constitution to every religious denomination to manage its own affairs in matters of religion, to establish and maintain institutions for religious and charitable purposes, to own and acquire property and to administer such property, cannot be taken away by law. I would like to know in the light of the recent judgment.....

Sri Kadidal MANJAPPA.—It does not apply to this Bill at all.

Sri S. SRINIVASA IYENGAR.—That is why I said, I would like to know. I would like to know how this House can legislate to take away the right. We can certainly legislate to regulate the functions. But, are we competent to take away the rights? I would very much like to be enlightened on that subject. Well, Sir, this order of the Supreme Court is applicable to the whole of India. Further, whatever piece of legislation we may pass here under Article 31-A, it is subjected to the approval of the President and all the more I would urge that we should legislate with care and caution.

Sir, coming to the main Bill itself, under Clause 5 of the Bill, we want to confer the occupancy right on the permanent tenant. In doing so, the permanent tenant will have a double gain. The first gain is that he will give rent to Government hereafter, a rent that will not exceed the land revenue. As it is now, the permanent tenant may be giving more than the land revenue. It is only in the case of kadim tenant that the cost of rent is equal to the land revenue. So far as permanent tenant is concerned, it is necessary for him to confine himself to the payment of rent equal to the land revenue, but the inamdar may demand more. So, when this Bill becomes law, the permanent tenant will save an appreciable portion of rent that he is now paying to the inamdars. Also, the permanent tenant will have the right to alienate. For that purpose the Bill stipulates the payment of money based on certain multiples of the land revenue or the basic value, whichever is more, to Government to have that occupancy right. That is quite clear; we can understand that.

Under section 6 of the Bill, a minor inam holder will also be registered as a permanent tenant. A minor inam holder today holds a land on behalf of the institution. The minor inam itself may be an institution and the institution owns the property for the purpose of its management. Sir, while registering the right of the minor inam holder the Bill seeks to eliminate such of those lands that come under sections 4 and 5. It is only the balance of land that will be registered in the name of the minor inam holder. The minor inam holder is a loser in two ways: one is, he will not get the rent that he used to get from the permanent tenant hereafter, and the other is, he loses the occupancy right that he possessed till to-day.

4-30 P.M.

He loses rights as well as the lands, because they will be registered in in the name of the permanent tenants and therefore he is a loser in two ways: he has been made to lose not only in the ownership of the land but also in the revenue. I therefore think it is not proper to demand 25 times the difference between the revenue assessment and the jodi in order to register him. He is a loser already and I do not know how you are justified in demanding 25 times the difference between the land revenue assessment and the jodi to register him as permanent occupant. He owns land himself already and further we recognise him as minor inam holder. In 1888 when the Government recognised him as minor inam holder, on the recommendation of the Inam Commission, the holder of such inam was asked to produce before the Commission *bona fide* records, *bona fide* sannads and only in such cases the Commissioner recommended confirmation. In all the other cases, a quit rent was fixed by the Commission and accepted by Government. You have assessed quit-rent. That quit-rent was for the purpose of establishing his rights. He is already paying quit-rent by which his right has rightly been recognised. Now once again to demand 25 times the amount for registering him as a permanent tenant is not proper.

So far as section 7 is concerned, the land on which the building is owned by somebody else can and will automatically be transferred to the person who owns the building. In such cases, the inamdar will have to lose the land and just compensation should be given to the institution. What I want to impress

is, so far as section 6 is concerned, till the passing of this Bill into law the minor inam holder will be paying a light assessment on the holding and according to section 9, after the amending Bill becomes law, he will have to pay an assessment equal to that prevailing in Government village. He loses even that.

Coming to clause 16, that is, the determination of the basic value, so far as that clause is concerned, I would put it this way: In the year 1927 there was a Government order that whenever improvement works are to be carried out in irrigation works in any inam village, three people had to contribute: one is the cultivator, the second is the jodidar and the third is the Government. The ratio of contribution between the Government and the inamdar was in accordance with the proportion of jodi to full assessment. If a tank is to be repaired, the Government is equally responsible. When the Government proposes to include the entire cost of maintenance of tanks in the expenditure column for the purpose of determining basic value, I wonder why the Government did not include in the revenue column so far as their share is concerned. In section 17 inamdars are considered to bear the entire cost of maintenance of tanks. Unfortunately, the entire cost is not met by the inamdar. It is met by all the people concerned. When computing the revenue these points are to be kept in view. If not, would it be proper to show it on the expenditure side only? That must be looked into.

Sir, literally the Government would be selling the land of the inamdar to the tenant. I would not object to that. We are legislating for land reforms and I welcome it. But when money is realised by the sale of property of a person to whom it was granted, it is but right that such amounts have to be constituted into a reserve fund in the name of those institutions. There are many institutions which are defunct to-day but still they are the owners of some lands. Somebody is enjoying them and the institution has not been benefited, and therefore we support the abolition of the religious and charitable inams. This must be done away with. But in doing so, it is better we constitute a reserve fund in the name of those institutions taking into consideration the value that the Government gets by the passing of this Bill.

Now the Government would get full assessment on all these $4\frac{1}{2}$ lakhs of acres. But what the Government propose to give back to the institution is only a fraction of what it used to get every year from its own lands. Government is not contributing even a pie out of its funds. What the institutions were getting all these days by way of revenue from the lands owned by them is not assured by Government. Government is gaining nearly one crore of rupees by this legislation, because, as I have said, they are recovering premiums from the tenants, and the minor inam holder. While doing so they will be getting premium on nearly one lakh of acres, since out of 4 lakhs of acres that will be brought under this legislation, a quarter may be given away to kadim tenants, 1/8 of that may be given to inamdar and the minor inam holder may have about one-fourth. . . .

Sri Kadidal MANJAPPA.—May I know where do you get this figure of 4 lakhs of acres?

Sri S. SRINIVASA IYENGAR.—It is according to your own figure. It is according to the Enquiry Committee Report, page 14, para 1. Government will be getting a revenue of nearly a crore of rupees by the sale of these properties and instead of Government retaining that amount it would be better if they constitute this amount into a fund for the maintenance of these religious institutions and for necessary improvements. It would be very necessary. And therefore I urge upon the Government to look into this point of view and see how best they can retain the independence of these religious institutions and see that these institutions do not come under the criticism of Legislature. They must be kept absolutely separated with sound financial backing as to manage their own affairs irrespective of the fact whether Government likes to give them

(SRI S. SRINIVASA IYENGAR.)

grant or not. Such an action is necessary as the Government have a provision in the present Bill to revise the annuity at any time they like. Government are not bound over to pay annually in perpetuity. In fact I would even go to the extent of requesting the Government that they should pay the tasdik allowance in perpetuity. That is the only way by which we can allay the fears of these institutions so that they may fulfil the purposes for which they are established, without fear or favour.

*ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ನಿನ್ನೆ ದಿನದಿಂದ ಈ ಮಸೂದೆಯ ಮೇಲೆ ಚರ್ಚೆಮಾಡುವಾಗಲೆಲ್ಲಾ ಈ ಇನಾಂಗಳು ಯಾವ ಸಂಸ್ಥೆಗಳಿಗೆ ಸೇರಿವೆಯೋ ಆ ಸಂಸ್ಥೆಗಳ ಆಡಳಿತದ ವಿಚಾರದಲ್ಲಿ ಬಹಳವಾಗಿ ಚರ್ಚೆ ಆಗುತ್ತಾ ಇದೆ. ಈ ಇನಾಂಗಳನ್ನು ರದ್ದುಮಾಡುವುದಕ್ಕೂ ಆ ಸಂಸ್ಥೆಗಳ ಆಡಳಿತಕ್ಕೂ ಯಾವ ವಿಧವಾದ ಸಂಬಂಧವೂ ಇಲ್ಲ ಎಂಬುದನ್ನು ಅನೇಕ ಸದಸ್ಯರು ಖಚಿತಗೊಳಿಸಿದ್ದಾರೆ. ಆ ಸಂಸ್ಥೆಗಳಲ್ಲಿ ಕೆಲವಾರು ಸಂಸ್ಥೆಗಳು ಅಷ್ಟು ಸಮರ್ಪಕವಾಗಿ ನಡೆಯುತ್ತಾ ಇಲ್ಲ ಎಂಬ ಅಂಶವೂ ಕೂಡ ಎಲ್ಲರಿಗೂ ಗೊತ್ತಿದೆ. ಆ ಸಂಸ್ಥೆಗಳು ಸರಿಯಾಗಿ ನಡೆಯಬೇಕಾದರೆ ಮದರಾಸಿನಲ್ಲಿರುವಂತೆ ಒಂದು ಕಾನೂನನ್ನು ಮಾಡಿ ಹತೋಟಿಯನ್ನಿಟ್ಟುಕೊಳ್ಳಬೇಕಾದದ್ದು ಅತ್ಯವಶ್ಯಕ. ಈ ಇನಾಂ ರದ್ದು ಮಾಡುವುದರಲ್ಲಿ ಸರ್ಕಾರಕ್ಕೂ ಮತ್ತು ರೈತರಿಗೂ ಮಧ್ಯೆ ಇರತಕ್ಕ ಈ ಸಂಸ್ಥೆ ಯಾವ ಸಂಸ್ಥೆಯೇ ಆಗಿರಲಿ, ಧಾರ್ಮಿಕ ಸಂಸ್ಥೆಯಾಗಿರಲಿ, ಮತೀಯ ಸಂಬಂಧವಾದ ಸಂಸ್ಥೆಯಾಗಿರಲಿ ಅಥವಾ ವ್ಯಕ್ತಿಯೇ ಆಗಿರಲಿ, ಈ ಮಧ್ಯವರ್ತಿ ಜನರನ್ನು ತೆಗೆದು ಹಾಕಿ ಸರ್ಕಾರಕ್ಕೂ ಮತ್ತು ರೈತರಿಗೂ ನೇರವಾದ ಸಂಪರ್ಕವನ್ನುಂಟು ಮಾಡಿಕೊಳ್ಳುವುದೇ ಈ ಮಸೂದೆಯ ಉದ್ದೇಶ. ಹಿಂದೆ ಪೈಯುಕ್ತಿಕವಾಗಿ ಕೊಟ್ಟಂಥ ಇನಾಂಗಳು ಮತ್ತು ಮತೀಯ ಮತ್ತು ಧಾರ್ಮಿಕ ಸಂಸ್ಥೆಗಳ ಇನಾಂಗಳು ಎಲ್ಲವನ್ನೂ ಕೂಡ ಒಂದೇ ಆಗಿ ಪರಿಗಣಿಸಿ ಒಂದು ಮಸೂದೆಯನ್ನು ತಂದರು ಎಂದುದು ಎಲ್ಲರಿಗೂ ಜ್ಞಾಪಕ ಇದೆ. ಅದರಿಂದ ಈ ಮತೀಯ ಸಂಬಂಧವಾದ ಸಂಸ್ಥೆಗಳಿಗೆ ಸಾಕಷ್ಟು ರಕ್ಷಣೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಶಂಕೆಯ ಮೇಲೆ ಇವಕ್ಕೆ ಬೇರೆ ಒಂದು ಮಸೂದೆಯನ್ನು ತರಬೇಕೆಂಬ ಅಂಶವನ್ನು ಒಪ್ಪಿದೆವು. ಈಗ ಈ ಮಸೂದೆ ಬಂದಿದೆ. ಮತೀಯ ಸಂಬಂಧವಾದ ಮತ್ತು ಧಾರ್ಮಿಕ ಸಂಬಂಧವಾದ ಸಂಸ್ಥೆಗಳಿಗೆ ದತ್ತಿಯಾಗಿಕೊಟ್ಟಿರತಕ್ಕ ಇನಾಂಗಳಿಗೆ ಈ ಮಸೂದೆ ಸಂಬಂಧಪಟ್ಟದ್ದು. ಈ ಇನಾಂಗಳನ್ನು ರದ್ದುಮಾಡುವುದರಿಂದ ಯಾವ ವಿಧದಲ್ಲಾದರೂ ಈ ಸಂಸ್ಥೆಗಳಿಗೆ ಧಕ್ಕೆ ಬರುತ್ತದೆಯೇ ಅಥವಾ ಈ ಧಾರ್ಮಿಕ ಕಾರ್ಯಗಳಿಗೆ ಊನ ಬರುತ್ತದೆಯೇ ಎಂಬುದನ್ನು ಆಲೋಚನೆಮಾಡಿದರೆ ಆ ಧಾರ್ಮಿಕ ಸಂಸ್ಥೆಗಳ ಉದ್ದೇಶಕ್ಕೆ ಅಡ್ಡಿಬರುವುದಕ್ಕೆ ಬದಲಾಗಿ ಆ ಉದ್ದೇಶ ಸಾರೋದ್ಧಾರವಾಗಿ ನೆರವೇರುವುದಕ್ಕೆನಹಾಯಕವಾಗುವ ರೀತಿಯಲ್ಲಿ ಈ ಮಸೂದೆಯನ್ನು ಈಗಿರುವಂತೆ ತಂದಿದ್ದಾರೆ. ಈ ಮಸೂದೆಯ ಹಿಂಭಾಗದಲ್ಲಿ ಕೊಟ್ಟಿರುವ ಮೆಮೋರ್ಯಾಂಡಮನ್ನು ಓದಿದರೆ ಈ ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ನಾವು ನಿರೀಕ್ಷೆಮಾಡಿದ್ದನ್ನೆಲ್ಲಾ ಸರ್ಕಾರದವರು ಮುಂದಾಗಿಯೇ ಆಲೋಚನೆಮಾಡಿ ಈ ಸಂಸ್ಥೆಗಳಿಗೆ ಸಹಾಯಮಾಡುವ ಭರವಸೆಯನ್ನು ಕೊಡುವ ರೀತಿಯಲ್ಲೇ ಇದೆ ಎಂದು ಅನ್ನಿಸುತ್ತದೆ. ವರ್ಷೇ ವರ್ಷೇ 18 ಲಕ್ಷ ರೂಪಾಯಿಗಳನ್ನು ಈ ಧಾರ್ಮಿಕ ಮತ್ತು ಮತೀಯ ಸಂಸ್ಥೆಗಳಿಗೆ ದತ್ತಿಯಾಗಿ, ತಸ್ದೀಕ್ ಆಗಿ ಕೊಡಬೇಕಾಗುತ್ತದೆ. ನಮಗೆ ಬರತಕ್ಕ ಹಣ ಫ್ಯೆನಾರ್ಷಿಯಲ್ ಮೆಮೋರ್ಯಾಂಡಂನಲ್ಲಿರುವ ರೀತ್ಯಾ 3 ಲಕ್ಷ ರೂಪಾಯಿ ಮಾತ್ರ. 3 ಲಕ್ಷ ರೂಪಾಯಿ ಅಲ್ಲದೆ ಇನ್ನೂ ಸ್ವಲ್ಪ ಜಾಸ್ತಿ ಆಗುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ತಾನೆ ಮಾತನಾಡಿದ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರು ಹೇಳಿದರು ಇದರಿಂದ ಕೋಟ್ಯಂತರ ರೂಪಾಯಿ ಲಾಭ ಬರುತ್ತದೆ ಎಂದು. ಕೋಟ್ಯಂತರ ರೂಪಾಯಿ ಹೇಗೆ ಲಾಭ ಬರುತ್ತದೆಯೋ ನನಗೆ ಗೊತ್ತಾಗುವುದಿಲ್ಲ. ವರ್ಷೇ ವರ್ಷೇ 18 ಲಕ್ಷ ರೂಪಾಯಿ ದತ್ತಿಯಾಗಿ ಕೊಡುವ ಕಡೆ 3 ಲಕ್ಷ ರೂಪಾಯಿ ಅಥವಾ ಮಾನ್ಯ ಮಂತ್ರಿಗಳು ಹೇಳಿದ ಹಾಗೆ 8 ಲಕ್ಷ ರೂಪಾಯಿ ಉತ್ಪತ್ತಿ ಬಂದರೂ ಸರ್ಕಾರದ ಖಜಾನೆಯಿಂದ 8 ಲಕ್ಷದಿಂದ 10 ಲಕ್ಷ ರೂಪಾಯಿಗಳ ವರೆಗೂ ಹೆಚ್ಚಾಗಿ ವರ್ಷೇ ವರ್ಷೇ ಈ ಸಂಸ್ಥೆಗಳಿಗೆ ಕೊಡಬೇಕಾಗುತ್ತದೆ. ಶ್ರೀಮಾನ್ ಭೀಮಪ್ಪನಾಯಕರು ಒಂದು ಮಾತು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಈ ಸಂಸ್ಥೆಗಳಿಗೆ ಲಕ್ಷಾಂತರ ರೂಪಾಯಿಗಳನ್ನು ದತ್ತಿಯಾಗಿ ಕೊಡುವಾಗ ಆ ಹಣ ಯಾವ ರೀತಿ ವಿನಿಯೋಗವಾಗುತ್ತದೆ, ಆ ಸಂಸ್ಥೆಗಳು ಯಾವ ರೀತಿ ಕೆಲಸಮಾಡುತ್ತವೆ, ಯಾವ ಉದ್ದೇಶಕ್ಕಾಗಿ ಆ ಸಂಸ್ಥೆಗಳು ಸ್ಥಾಪನೆ ಆದವೋ, ಯಾವ ಉದ್ದೇಶಕ್ಕಾಗಿ ಆ ಸಂಸ್ಥೆಗಳು ಇದುವರೆಗೂ ಕೆಲಸ ಮಾಡಿಕೊಂಡು ಬಂದಿವೆಯೋ ಆ ಉದ್ದೇಶ ಸಾರ್ಥಕವಾಗುತ್ತದೆಯೇ, ಇಲ್ಲವೇ ಎಂಬುದನ್ನು ಕೂಡ ನಾವು ನೋಡಬೇಕಾದದ್ದು ಅವಶ್ಯಕ. ಆ ದೃಷ್ಟಿಯಿಂದ ಈ ಕಾನೂನಿನಲ್ಲಿ ಕೊಡತಕ್ಕ ಹಣವನ್ನು ಕೆಲವು ಕಾಲದ ಅಂತರದಲ್ಲಿ ಎಂದರೆ 5 ಅಥವಾ 10 ವರ್ಷಗಳಲ್ಲಿ ಪುನರ್‌ವಿಮರ್ಶೆಮಾಡಿ ಆ ಸಂಸ್ಥೆಗೆ ಇಷ್ಟೆಂದು ಸಹಾಯ ಕೊಡಬೇಕಾದದ್ದು ಅಗತ್ಯವೇ ಅಲ್ಲವೇ ಎಂಬತಕ್ಕ ಅಧಿಕಾರವನ್ನು ಕೂಡ ಈ ಕಾನೂನಿನಲ್ಲಿ ಇಟ್ಟುಕೊಳ್ಳುವುದು ಅತ್ಯವಶ್ಯಕ ಎಂದು ನನಗೆ ಅನ್ನಿಸುತ್ತದೆ.

ಶ್ರೀಮಾನ್ ಭೀಮಪ್ಪನಾಯಕರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಆ ಮಹಾನುಭಾವರಾದ ಶಂಕರಾಚಾರ್ಯರ ಜ್ಯೋತಿ ಅಲ್ಲ ಅಷ್ಟಾಗಿ ಬೆಳಗುತ್ತಾ ಇಲ್ಲ ಎಂದು. ಆ ಮಾತು ಅನವಶ್ಯಕ ಎಂದು ನನಗೆ ಅನ್ನಿಸುತ್ತದೆ. ಅಲ್ಲ ಆ ಜ್ಯೋತಿ ಬೆಳಗುತ್ತಾಯಿದೆಯೋ ಇಲ್ಲವೋ ಎಂಬ ಚರ್ಚೆ ಇಲ್ಲಿ ಅನಾವಶ್ಯಕ. ನನ್ನ ಪೈಯಕ್ತಿಕ ಅಭಿಪ್ರಾಯವನ್ನು ಹೇಳುವುದಾದರೆ ಆ ಮಾತು ಅಷ್ಟು ಸತ್ಯವಲ್ಲದ ಮಾತು. ಆ ಮಠದ ನುತ್ತ ಎಲ್ಲ ಕಡೆಯಲ್ಲಿರತಕ್ಕ ಭಕ್ತರ ವೃಂದವೂ ಸೇರಿಯೇ ಸೇರುತ್ತದೆ. ಆ ಭಕ್ತ ವೃಂದದಲ್ಲಿ ಕೆಲವರು, ಯಾವ ಆದರ್ಶವನ್ನಿಟ್ಟುಕೊಂಡು ಆ ಸಂಸ್ಥೆಯನ್ನು ಬೆಳೆಸಿಕೊಂಡು ಬಂದಿದ್ದಾರೋ, ನಡೆಸಿಕೊಂಡು ಬಂದಿದ್ದಾರೋ ಆ ಆದರ್ಶವನ್ನು ಅನುಸರಿಸದೇ ಇರಬಹುದು. ಅಷ್ಟು ಮಾತ್ರಕ್ಕೆ ನಾವು ಆ ಸಂಸ್ಥೆ ಸರಿಯಾಗಿ ನಡೆಯುತ್ತಿಲ್ಲ, ಯಾವ ಉದ್ದೇಶದಿಂದ ಅದು ಸ್ಥಾಪನೆ ಆಯಿತೋ ಆ ಉದ್ದೇಶ ನೆರವೇರುತ್ತಾ ಇಲ್ಲ ಎಂದು ಹೇಳುವುದು ಸರಿಯಲ್ಲ. ಶ್ರೀಮಾನ್ ಭೀಮಪ್ಪನಾಯಕರ

ನಾನು ಹೋಗಿ ನೋಡಿಲ್ಲ ಎಂದು ಹೇಳಿದರು. ಅಂದ ಮೇಲೆ ಬರೀ ರಿಪೋರ್ಟಿನ ಮೇಲೆ ಇಷ್ಟೊಂದು ಕಠಿಣವಾಗಿ ಮಾತನಾಡುವುದು ಅನವಶ್ಯಕವಾಗಿತ್ತು ಎಂದು ನನಗೆ ಅನ್ನಿಸುತ್ತದೆ. ಈ ಇನಾಂಗಳನ್ನು ರದ್ದು ಮಾಡುವುದರಲ್ಲಿ ಯಾರದೂ ಭಿನ್ನಾಭಿಪ್ರಾಯ ಅಷ್ಟಾಗಿ ಇಲ್ಲ ಎಂಬುದು ನಿನ್ನೆಯ ಚರ್ಚೆಯಿಂದ ಮನದಟ್ಟಾಗಿದೆ. ಶ್ರೀಮಾನ್ ಪಿ. ಆರ್. ರಾಮಯ್ಯನವರು ಮಾತನಾಡುವಾಗ ಇನಾಂಗಳನ್ನು ಉಳಿಸಿಕೊಳ್ಳಬೇಕು ಎಂದು ಅವರೇನೂ ಹೇಳಲಿಲ್ಲ. ಅವರು ಹೇಳಿದು : ಈ ಜಹಗೀರಿಗಳಲ್ಲಿ ಕೆಲಸ ಸರಿಯಾಗಿ ನಡೆದಿಲ್ಲ, ಆದ್ದರಿಂದ ರದ್ದು ಮಾಡುತ್ತೇವೆ ಎನ್ನುವುದು ಸರಿಯಲ್ಲ ಎನ್ನುವ ಅರ್ಥದಲ್ಲಿ ಮಾತನಾಡಿದರು ಎಂದು ನಾನು ತಿಳಿದು ಕೊಂಡಿದ್ದೇನೆ. ಸಂಸ್ಥೆಗಳ ಕೆಲಸ ಸರಿಯಾಗಿ ನಡೆದಿದೆ ಎನ್ನುವವರು ಕೆಲವರು, ಸರಿಯಾಗಿ ನಡೆದಿಲ್ಲ ಎನ್ನುವವರು ಕೆಲವರು, ಇದರಲ್ಲಿ ಭಿನ್ನಾಭಿಪ್ರಾಯ ವಿದೆ. ಆ ಚರ್ಚೆ ಈಗ ಅನಾವಶ್ಯಕ. ಈಗ ನಮಗೆ ಬೇಕಾಗಿರುವುದು ಈ ಇನಾಂಗಳನ್ನು ರದ್ದುಮಾಡುವುದಕ್ಕೆ, ಜಹಗೀರುಗಳನ್ನು ರದ್ದುಮಾಡುವುದಕ್ಕೆ, ಭಿನ್ನಾಭಿಪ್ರಾಯ ಇದೆಯೇ ಎಂಬುದನ್ನು ಪರ್ಯಾಲೋಚನೆ ಮಾಡಿ ನೋಡುವುದಾದರೆ ಯಾರೊಬ್ಬರೂ ಕೂಡ ಇದರಲ್ಲಿ ಭಿನ್ನಾಭಿಪ್ರಾಯ ಇದೆ, ಇದು ಹೇಗೆ ಇದೆಯೋ ಹಾಗೆಯೇ ನಡೆದುಕೊಂಡು ಹೋಗಬೇಕು, ಜಹಗೀರಿ ಇದ್ದೇಇರಬೇಕು ಎಂದು ಹೇಳಿಲ್ಲ. ಶ್ರೀ ಶ್ರೀನಿವಾಸಯ್ಯಂಗಾರ್ಯರು ಕಾನೂನಿನಲ್ಲಿ ತೊಡಕು ಇದೆ ಎಂದು ಹೇಳಿದರು. ಕಾನೂನಿನಲ್ಲೆನೂ ತೊಡಕಿಲ್ಲ. ಅವರು ಹೇಳಿದ ಸುಪ್ರೀಂ ಕೋರ್ಟಿನ ತೀರ್ಮಾನ ಇದಕ್ಕೆ ಅನ್ವಯ ಆಗುವುದಿಲ್ಲ ಎಂದು ನಾನು ತಿಳಿದು ಕೊಂಡಿದ್ದೇನೆ. ಒಂದು ಪಕ್ಷ ಅನ್ವಯ ಆಗುವುದಾದರೂ ಜನರ ಇಚ್ಛೆಯ ಮೇಲೆ ಯಾವುದೂ ನಿಲ್ಲುವುದಿಲ್ಲ. ಅಂಥ ಅವಶ್ಯಕತೆ ಬಂದರೆ ಕಾನೂನನ್ನೇ ತಿದ್ದುಪಡಿ ಮಾಡುವ ಅಧಿಕಾರ ಜನಗಳಿಗೆ ಇದೆ. ರಾಜ್ಯಾಂಗವನ್ನೇ ತಿದ್ದುಪಡಿಮಾಡಿ ಈ ಇನಾಂಗಳನ್ನು ರದ್ದು ಮಾಡುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಏಕೆಂದರೆ ಈ ಸಭೆಯಲ್ಲಿರತಕ್ಕ 100 ಜನ ಸದಸ್ಯರಲ್ಲಿ 100 ಜನರೂ ರದ್ದಾಗಬೇಕೆಂದು ಇದ್ದಾರೆಯೇ ವಿನಾ ರದ್ದಾಗಬಾರದು ಎಂದು ಯಾರೂ ಇಲ್ಲ. ಯಾವ ರೀತಿ ಮಾಡಬೇಕು, ಆ ಸಂಸ್ಥೆಗಳಿಗೆ ಯಾವ ರೀತಿ ರಕ್ಷಣೆ ಕೊಡಬೇಕು, ಅವನ್ನು ಯಾವ ರೀತಿ ನಡೆಸಿಕೊಂಡು ಬರಬೇಕು ಎಂಬ ವಿಚಾರದಲ್ಲಿ ಮಾತ್ರ ಒಬ್ಬೊಬ್ಬರು ಒಂದೊಂದು ವಿಧವಾದ ಸಲಹೆ ಕೊಟ್ಟಿದ್ದಾರೆ. ನನ್ನ ಅಭಿಪ್ರಾಯ ಈ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಕಾದಷ್ಟು ರಕ್ಷಣೆ ಕೊಡುವುದು ನಮ್ಮ ಕರ್ತವ್ಯ. ಅದರಿಂದ ಸಾರ್ವಜನಿಕರ ಹಿತಕ್ಕೆ ಧಕ್ಕೆ ಬರುವುದಿಲ್ಲ. ಆದ್ದರಿಂದ ಈ ಸಂಸ್ಥೆಗಳಿಗೆ ರಕ್ಷಣೆ ಕೊಟ್ಟು ಇನಾಂ ಮತ್ತು ಜಹಗೀರಿಗಳನ್ನು ಕೂಡಲೇ ರದ್ದುಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ.

*ಶ್ರೀ ಟಿ. ಹನುಮಯ್ಯ (ಹಿರಿಯೂರು—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೆ, ಸ್ವಾಮಿ, ಮಾನ್ಯ ಮಂತ್ರಿಗಳು ತಂದಿರತಕ್ಕಂಥ ಈ ಮಠ ಸಂಬಂಧಪಾದ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಮಾತ್ರ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಸಾಧಾರಣವಾಗಿ ಇದು ಹಿಂದೆ ಕೊಟ್ಟಿರುವ ಒಂದು ಇನಾಂ. ಹಿಂದೆ ಅನೇಕ ರಾಜಮಹಾರಾಜರು ರಾಜ್ಯ ಭಾರ ಮಾಡುವಾಗ ತಮ್ಮ ಇಷ್ಟಬಂದಹಾಗೆ ಇನಾಂ ಕೊಟ್ಟರು. ಈಗಲೂ ಇನಾಂ ಕೊಡುತ್ತೇವೆಂದು ಹೇಳುತ್ತಾರೆ. ಇದು ಒಂದು ಬಹುಮಾನವಾಗಿ ಕೊಟ್ಟಿರುವುದು. ಸಂಸ್ಥೆಗಳು ಏನಿವೆಯೋ ಅವನ್ನು ತೆಗೆಯಬಾರದೆಂಬುದನ್ನು ನಾನು ಕೂಡ ಒಪ್ಪಬಹುದು. ಆದರೆ ಏನೊಂದು ಧರ್ಮಪದ್ಧತಿ ಇದೆಯೋ, ಹಿಂದಿನ ಸರ್ಕಾರ ಅದಕ್ಕೆ ಧರ್ಮಾರ್ಥವಾಗಿ ಏನು ಕೊಟ್ಟಿತ್ತೋ ಅದಕ್ಕೆಲ್ಲಾ ಹಣ ಕೊಡಬೇಕೆಂದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳುವುದಾದರೂ ರಾಜ್ಯಾಂಗದ ದೃಷ್ಟಿಯಿಂದ ಒಪ್ಪಲೇಬೇಕಾಗಿದೆ.

ಮುಖ್ಯವಾಗಿ ಹಿಂದೆ ಮಾತನಾಡಿದ ಅನೇಕ ಮಹಾಶಯರು ಈ ಧರ್ಮ ಸಂಸ್ಥೆಗಳು ಬಹಳ ಎಚ್ಚರಿಕೆಯಿಂದ ಬಹಳ ಚೆನ್ನಾಗಿ ನಡೆಸುತ್ತಿರುವ ಮಠಗಳನ್ನು ಉದ್ಧಾರ ಮಾಡುತ್ತಿವೆ, ಇವಕ್ಕೆ ಕೊಡುವ ಹಣವೆಲ್ಲವನ್ನೂ ಕೊಡಬೇಕು ಎಂದು ಹೇಳಿದರು. ಮಠ ಸಂಬಂಧವಾದ ಮತ್ತು ಧರ್ಮಾರ್ಥವಾದ ಮಠ, ಮಹಂತು ಎಲ್ಲಿವೆಯೋ ಅದರ ಸುತ್ತಮುತ್ತಲೂ ಧರ್ಮ ಬಿಡೆಯೆ ಅಥವಾ ಇತರ ಕಡೆ ಇದೆಯೆ ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ಇತರ ಕಡೆ ಇದೆಯೆಂದು ಹೇಳಬಹುದು. ಏಕೆಂದರೆ ಬರೀ ಮಠ ಅಥವಾ ಮಹಂತು ಇರುವ ಕಡೆ ಅದರ ಸುತ್ತಲೂ ಧರ್ಮವಿದ್ದರೆ, ಈ ದೇಶದಲ್ಲಿರುವ ಎಲ್ಲ ಜನರ ಧರ್ಮವನ್ನೆಲ್ಲಾ ಆ ಧರ್ಮ ಸಂಸ್ಥೆಗಳೇ ಕಾಪಾಡಬೇಕೆಂದು ಹೇಳಿದರೆ ದೇಶದಲ್ಲಿರುವ ಗ್ರಾಮಗಳನ್ನೆಲ್ಲಾ ಇನಾಂತಿಗಳಾಗಿ ಅವರಿಗೇ ಬಿಡಬೇಕಾಗುತ್ತದೆ. ಆದ್ದರಿಂದ ಮುಖ್ಯವಾಗಿ ಹಿಂದಿನ ರಾಜಾಧಿರಾಜರುಗಳು ಯಾವ ಒಂದು ಉದ್ದೇಶದಿಂದ ಈ ಮಠಗಳನ್ನಿಟ್ಟರೋ ಆ ಉದ್ದೇಶ ಈಗ ನೆರವೇರದೆ ಇವುಗಳ ವರ್ತನೆ ಬದಲಾವಣೆಯಾಗಿದೆ. ಏಕೆಂದರೆ ನಿಜವಾಗಿಯೂ ಕೂಡ ಹಿಂದೆ ಧರ್ಮ ಸಂಸ್ಥೆ ಮತ್ತು ರಾಜಕೀಯ ಸಂಸ್ಥೆಗಳು ಒಂದೇ ಆಗಿದ್ದುವು. ಉದಾಹರಣೆಗೆ, ಹಿಂದೆ ಬಸವೇಶ್ವರರು ಕೂಡ ದೊಡ್ಡದಾಗಿ ಮಠ ಸಂಬಂಧವಾದ ಪ್ರಚಾರ ಮಾಡುವುದರ ಜೊತೆಗೆ ರಾಜಕೀಯವನ್ನು ಕೂಡ ಪ್ರಚಾರ ಮಾಡಿದರು. ಆದ್ದರಿಂದ ರಾಜಕೀಯ ಸಂಸ್ಥೆ ಅಥವಾ ಧರ್ಮಸಂಸ್ಥೆ, ಮಠ ಸಂಬಂಧವಾದ ಸಂಸ್ಥೆ ಎಂದು ಬೇರೆ ಪ್ರತ್ಯೇಕವಾಗಿ ಹಿಂದೆ ಇರಲಿಲ್ಲ. ಯಾವುದೋ ಉದ್ದೇಶದಿಂದ ಹಿಂದೆ ಕೊಟ್ಟಿರುವ ಉತ್ತೇಜನವನ್ನು ಗಮನಿಸಿ ಈಗಲೂ ಅದೇರೀತಿ ನಡೆಸುವುದು ಸರಿಯಲ್ಲ ಎಂದು ಪ್ರಾರ್ಥನೆ ಮಾಡುತ್ತೇನೆ.

ತತ್ವಬೋಧೆಯಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಎಂದು ಭೇದ ಮಾಡಿದ್ದಾರೆ. ಸನ್ಯಾಸಿಗಳು ಸಹ ಹೀಗೇ ಭೇದ ಮಾಡಿಕೊಂಡು ಒಬ್ಬರಿಗೊಬ್ಬರು ಒಪ್ಪುವುದಿಲ್ಲ. ಹೀಗಿರುವಾಗ ಸನ್ಯಾಸಿಗಳು ಒಂದು ಗುಡ್ಡದಮೇಲೆ ಯಾರೂ ನೋಡದಿರುವ ಕಡೆ ಬೋಧೆ ಮಾಡುವಾಗ ದೇಶದಲ್ಲಿರುವ ಬಡರೈತರಿಗೆ, ಹೊಟ್ಟೆ ಬಟ್ಟೆಗಾಗಿ ಜಪಾನನ್ನು ಉಳುತ್ತಾ ಕಷ್ಟಪಟ್ಟು ಜೀವನ ಮಾಡುವವರಿಗೆ ತತ್ವಬೋಧೆ ಮಾಡಲು ಹಣ ತೆಗೆದುಕೊಳ್ಳುವುದು ಸರಿಯಲ್ಲ. ಉದಾಹರಣೆಗೆ ಹಿಮಾಲಯಪರ್ವತ ನೋಡಿದ್ದೇನೆ. ಅಲ್ಲಿ ಅನೇಕ ಸನ್ಯಾಸಿಗಳಿದ್ದಾರೆ, ತತ್ವಬೋಧೆ ಮಾಡುತ್ತಾರೆ, ಅವರಿಗೆ ಯಾವುದೂ ಇನಾಂ ಇಲ್ಲ. ಆದ್ದರಿಂದ ಮುಖ್ಯವಾಗಿ ತತ್ವಬೋಧೆಗೆ. ಧರ್ಮವನ್ನು ಸ್ಥಾಪಿಸುವುದಕ್ಕೆ ಈ ಇನಾಂಗ್ರಾಮ ಇರಬೇಕೆಂದು ಹೇಳಿದರೆ ಖಂಡಿತ ಒಪ್ಪುವುದಕ್ಕಾಗುವುದಿಲ್ಲ.

ಎರಡನೆಯದಾಗಿ ಈ ಮಸೂದೆಯನ್ನು ರಚಿಸಿದಲಾಗಾಯ್ತು ಪ್ರತಿದಿವಸವೂ ಪತ್ರಿಕೆಗಳಲ್ಲಿ ಒಂದಲ್ಲ ಒಂದು ವಿಧದಲ್ಲಿ ಶೃಂಗೇರಿ ಜಹಗೀರಿಯನ್ನೇಕೆ ರದ್ದು ಮಾಡಬೇಕು, ರದ್ದು ಮಾಡಿದರೆ ಅದರಿಂದ ಬಹಳ ಕಷ್ಟವಾಗುತ್ತದೆ ಎಂದು ಬೇಕಾದಷ್ಟು ಪ್ರಕಟವಾಗುತ್ತಿತ್ತು

(ಶ್ರೀ ಟಿ. ಹನುಮಯ್ಯ)

ರುವುದನ್ನು ನಾನು ನೋಡಿದ್ದೇನೆ. ಈ ದಿವಸ ಕೂಡ ಸನ್ಯಾಸಿಗಳಿದ್ದಾರೆ, ತತ್ವಬೋಧೆ ಮಾಡುವವರಿದ್ದಾರೆ, ಗುರುಗಳಿಗೆ ಶಿಷ್ಯರಿದ್ದಾರೆ, ಅವರು ಬೇಕಾದ ಹಣ ಕೊಡುತ್ತಾರೆ. ಹಾಗಿರುವಾಗ ಶಿಷ್ಯರು ಗುರುಗಳಿಗೆ ಹಣ ಕೊಡಬೇಕೆಂದು ಹೇಳುವುದನ್ನು ಬಿಟ್ಟು ಇನಾಂ ಗ್ರಾಮಗಳು ಇರಬೇಕು, ಆ ಗ್ರಾಮಗಳಲ್ಲಿರುವ ಜನರು ಗುರುಗಳ ಸೇವೆ ಮಾಡಬೇಕು ಎಂದು ಹೇಳುವುದಾದರೆ ಅಲ್ಲಿನ ಶಿಷ್ಯರು ಎಷ್ಟು ಜಾಗ್ರತೆ ಉದ್ಧಾರ ವಾಗುತ್ತಾರೋ ಅರ್ಥವಾಗುವುದಿಲ್ಲ. ಇದನ್ನು ಶಿಷ್ಯರು ಚೆನ್ನಾಗಿ ಅರ್ಥಮಾಡಿಕೊಂಡಿರಬೇಕು. ಸಾಧಾರಣವಾಗಿ ಹಿಂದೆ ಬಸವೇಶ್ವರರು ಮತ ಪ್ರಚಾರ, ಸಂಸ್ಥೆ ಮುಂತಾದ್ದನ್ನು ಮಾಡಿದರು, ತತ್ವ ಬೋಧೆ ಮಾಡಿದರು. ಆಗ ಯಾವ ಜಾತಿ ಮತ ಬೇಧ ವಿಲ್ಲದೆ ಕೇವಲ ಅಸ್ಪೃಶ್ಯರಾದ ಹರಿಜನರಿಗೂ ಭೇದ ವಿಲ್ಲದೆ ಬೋಧೆಮಾಡಿ ಧರ್ಮಸ್ಥಾಪನೆ ಮಾಡಿದರು. ಈಚೆಗೆ ರಾಮಾನುಜಾಚಾರ್ಯರೂ ಕೂಡ ಅದೇರೀತಿ ಮಾಡಿದ್ದಾರೆ. 1947 ರಿಂದ ಕೂಡ ಪ್ರಜಾಪ್ರಭುತ್ವ ಬಂದು ಎಲ್ಲರಿಗೂ ಸರಿಸಮಾನವಾದ ಹಕ್ಕು ಬಂದಿರು ವಾಗಲೂ ಅನೇಕ ಮಠ, ಮಹಂತು ಮತ್ತು ದೇವ ಸ್ಥಾನಗಳಿಗೆ ಅಸ್ಪೃಶ್ಯರ ಪ್ರವೇಶಕ್ಕೆ ಅವಕಾಶ ಮಾಡಿ ದ್ದಾರೆ. ಹಾಗಿರುವಾಗ ಸಾರ್ವಜನಿಕರ ಹಣವನ್ನು ಅವರ ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಧರ್ಮ ಸಂಸ್ಥೆ ಹೆಸರಿನಲ್ಲಿ ಮತ್ತು ಗುರುಗಳ ಹೆಸರಿನಲ್ಲಿ ಮತ್ತು ಮಠದ ಹೆಸರಿನಲ್ಲಿ ಖರ್ಚು ಮಾಡುವುದು ಖಂಡಿತ ದೇಶಕ್ಕೆ ಒಳ್ಳೆಯದಲ್ಲ, ರಾಜ್ಯಾಂಗಕ್ಕೆ ವಿರೋಧ. ಶ್ರೀ ಭೀಮಪ್ಪನಾಯಕರು ಹೇಳಿದ ಹಾಗೆ ಖಂಡಿತ ಸಾರ್ವಜನಿಕರೆಲ್ಲರಿಗೂ ಅವಕಾಶವಿರುವ ಸ್ಥಳವೆಲ್ಲದೆಯೋ ಅಲ್ಲಿಗೆ ಮಾತ್ರ ಸಾರ್ವಜನಿಕರ ಹಣ ಕೊಡಬೇಕು, ಇಲ್ಲದಿದ್ದರೆ ಕೊಡಬಾರದು. ಇದಕ್ಕೆ ಮನೂದೆಯಲ್ಲಿ ಸರಿಯಾದ ಅವಕಾಶ ಮಾಡಬೇಕು. ಉದಾಹರಣೆಗೆ ಇಂಥ ಅನೇಕ ಮಠಗಳಿವೆಯೆಂದು ಶ್ರೀ ಭೀಮಪ್ಪನಾಯಕರು ಹೇಳಿದ್ದಾರೆ. ಸಿರಿ ಗೆರೆ, ಮಲ್ಲಾಡಿಹಳ್ಳಿ ಮುಂತಾದಕಡೆ ಇರುವ ಮಠ ಗಳಲ್ಲಿ ಸಾರ್ವಜನಿಕರಿಗೆಲ್ಲಾ ಅವಕಾಶಕೊಟ್ಟು ತತ್ವ ಬೋಧೆ ಮಾಡುತ್ತಾರೆ. ಹಾಗೆ ಮಾಡುವುದು ಬಹಳ ಒಳ್ಳೆಯದು. ಈಗ ಏನೊಂದು ಮನೂದೆ ತಂದಿ ದ್ದಾರೋ ಅದನ್ನು ಅದಷ್ಟು ಜಾಗ್ರತೆ ಜಾರಿಗೆ ತರು ವುದು ಬಹಳ ಒಳ್ಳೆಯದು. ಮಂತ್ರಿಗಳು ಕೂಡ ಬಹಳ ಧೈರ್ಯದಿಂದ ಇಂಥ ಮನೂದೆಯನ್ನು ತೆಗೆದು ಕೊಂಡು ಬಂದಿರುವುದಕ್ಕಾಗಿ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now rise for the day and meet tomorrow at 12 NOON.

The House adjourned at Five of the Clock to meet again at Twelve of the Clock on Friday, the 2nd April 1954.